Motion has got precedence over other legislative matters. You can't do that. ಈಗ ನಾವು ಅದನ್ನು ಬಿಟ್ಟು ಬೇರೆ legislative businessಗೆ jump ಮಾಡಲಿಕ್ಕಾಗುತ್ತದೆಯೇ? ಆ ರೀತಿ ನಾವು ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಚರ್ಚೆ stalemate ಆಗುವುದು ಬೇಡ. ತಾವು ದಯಮಾಡಿ ಚರ್ಚೆಯನ್ನು ಶುರು ಮಾಡಿ.

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ Chief Secretary ಇಲ್ಲದಿರುವ ಬಗ್ಗೆ we are not serious. ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ serious ಆಗಿ ಇರಬೇಕಲ್ಲವೇ? ತಾವು ಈಗ ಬಂದಿರಿ. House assemble ಆಗಿ 30 minutes ಆದಮೇಲೆ ನೀವು ಬಂದಿದ್ದೀರಿ. ಇವತ್ತು ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದರೆ ನಾವು ಇನ್ಯಾರಿಗೆ ಹೇಳಬೇಕು? ನಾವು ಬಹಳಷ್ಟು ವಿಷಯಗಳನ್ನು ಇವತ್ತು ಹೇಳಬೇಕಾಗಿದೆ. ಪತ್ರಿಕೆಗಳಲ್ಲಿ ಬರತಕ್ಕಂಥ ವಿಚಾರಗಳ ಬಗ್ಗೆಯೂ ಸಹ ನಾವು ಪ್ರಸ್ತಾಪ ಮಾಡಬೇಕಾಗಿದೆ. We have taken a decision. ಇವತ್ತು ಜನರಿಗೆ ತೊಂದರೆ ಆಗತಕ್ಕಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ನಾವು ನಿಂತಿದ್ದೇವೆ. How far you will take? ಅದನ್ನು ನೀವು ಏನು ಮಾಡುತ್ತೀರೋ? ಅದನ್ನು ನೀವು ಹಗುರವಾಗಿ ತೆಗೆದುಕೊಳ್ಳುತ್ತೀರೋ ಅಥವಾ ಗಂಭೀರವಾಗಿ ತೆಗೆದುಕೊಳ್ಳುತ್ತೀರೋ ಎಂಬ ಬಗ್ಗೆ ನಾವು ಹೇಳುತ್ತಿಲ್ಲ. ನಾವು ಏನು ಹೇಳಲಿಕ್ಕೆ ಹೊರಟಿದ್ದೇವೆ ಎಂದರೆ, ಇವತ್ತು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ, ಸರ್ಕಾರ ನಡೆಸತಕ್ಕಂಥ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇರಲಾರದಂತಹ ಪರಿಸ್ಥಿತಿಯಲ್ಲಿ ಗಂಭೀರವಾದಂತಹ ಸಮಸ್ಯೆಯನ್ನು ನಾವು ಹೇಗೆ ಪ್ರಸ್ತಾಪಿಸಲು ಸಾಧ್ಯ? ಇವತ್ತು ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದವರು ಕೊಟ್ಟಿದ್ದಾರೆ, ಪ್ರಸ್ತಾಪ ಮಾಡಲಿದ್ದಾರೆ, ಆದ್ದರಿಂದ ನಾವು ಸದನಕ್ಕೆ ಹೋಗಲೇಬೇಕು ಎಂದು ನಿರ್ಧಾರ ತೆಗೆದುಕೊಂಡು ಬೇರೆ ವಿಚಾರಗಳನ್ನು ದೂರವಿಟ್ಟು ಈ ಸದನಕ್ಕೆ ಬರಲಿಕ್ಕೆ ಆಗುವುದಿಲ್ಲವೇ? ತಾವು ಹಿಂದೆ ಬಂದಿರಲಿಲ್ಲವೇ? ನಾವೂ, ನೀವೂ ಕೂಡಿ

ಅದನ್ನು ಮಾಡಿರಲಿಲ್ಲವೇ? ಈಗ ಏಕೆ ಈ ತರಹದ ಹಠಮಾರಿತನ ತೋರಿಸುತ್ತಿದ್ದೀರಿ? ಏನೋ ಹೇಳುತ್ತಾರೆ, ಹೋಗುತ್ತಾರೆ ಎನ್ನತಕ್ಕಂಥ ಧಾಟಿಯಲ್ಲಿ ಸರ್ಕಾರ ಇದ್ದರೆ ಅದಕ್ಕೆ ಜನ ಉತ್ತರ ಕೊಡುತ್ತಾರೆ. ಇವತ್ತು ಈ ತರಹ ನಡೆದುಕೊಳ್ಳುವುದು ಅಲ್ಲವೇ ಅಲ್ಲ. ಇವತ್ತು ಏನು ಜನರಿಗೆ ರಾಜ್ಯದಲ್ಲಿ ತೊಂದರೆಯಾಗಿದೆ, ಎಲ್ಲಿ ತಾವು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿಲ್ಲ ಅನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇವತ್ತು ನಾವು ಬಂದಿದ್ದೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಎಲ್ಲರೂ ಕೂಡ ಈ ಸದನದಲ್ಲಿ ಇರಬೇಕು. ನಾವು ಆಡತಕ್ಕಂಥ ಮತ್ತು ಹೇಳತಕ್ಕಂಥ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬುದು ನಮ್ಮ ಅಭಿಲಾಷೆಯಾಗಿದೆ. ಅದಕ್ಕಾಗಿಯೇ ನಾನು ಇವತ್ತು ಮಾನ್ಯ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ಅಧಿಕಾರಿಗಳಿಗೋಸ್ಕರ ನಾವು ಹೊರಗಡೆ ಹೋಗತಕ್ಕಂಥದ್ದಲ್ಲ. ಅಧಿಕಾರಿಗಳನ್ನು ನಿಯಂತ್ರಣ ಮಾಡತಕ್ಕಂಥ ಕೆಲಸ ನಿಮ್ಮದು. ಅಧಿಕಾರಿಗಳು ಇವತ್ತು ಕರ್ನಾಟಕ ರಾಜ್ಯದಲ್ಲಿ ನಿಮ್ಮ ಮಾತನ್ನು ಕೇಳುತ್ತಿಲ್ಲ. ಈ ಮಾತನ್ನು ನಾವು ಹೇಳುತ್ತಿಲ್ಲ. ಈ ಹೇಳಿಕೆಯನ್ನು ನೀವೇ ಹೇಳುತ್ತಿದ್ದೀರಿ. ಇವತ್ತು ಸದನದಲ್ಲೂ ಕೂಡ ಇದೇ ತರಹ ನಡೆದುಕೊಂಡರೆ ನಾವು ಅದನ್ನು ಹೇಗೆ ಸಹನೆ ಮಾಡಲಿಕ್ಕೆ ಆಗುತ್ತದೆ?

ಶ್ರೀ ಎಂ.ಪಿ.ಪ್ರಕಾಶ್: ತಾವು ಈ ಸಂದರ್ಭದಲ್ಲಿ ನಿಲುವಳಿ ಸೂಚನೆ ಮೂಲಕ ಬಹಳ ಗಂಭೀರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಲು ಇಚ್ಛಿಸಿದ್ದೀರಿ. ಬರಗಾಲದ ಬಗ್ಗೆ ಸರ್ಕಾರದ ಕ್ರಮಗಳ ಬಗ್ಗೆ ಚರ್ಚೆ ಮಾಡುವ ನಿಲುವಳಿ ಸೂಚನೆ ಇದೆ. ನಿಲುವಳಿಸೂಚನೆ ಸಾದುವಾದದ್ದೊ, ನಿಲುವಳಿ ಸೂಚನೆಯನ್ನು ನೀವು ಈಗ ಕೈಗೆತ್ತಿಕೊಳ್ಳಬೇಕೇ ಅದಕ್ಕಿರುವ ಸಾಧಕ ಬಾಧಕಗಳೇನು? ಅಂತಹ ವಿಚಾರದ ಬಗ್ಗೆಯೂ ನಾವು ಚರ್ಚೆ ಮಾಡಬೇಕಾಗುತ್ತದೆ, With regard to the admissibility of the Adjournment Motion we have got our own reservation and it is left to you after hearing us also and after hearing him. He has to convince you that this adjournment motion is absolutely necessary and that it is confined with the rules connected with it ಎಂದು ಅವರು ಹೇಳುತ್ತಾರೆ, ಅದಕ್ಕೆ ನಾವು ಏನೇನೆಲ್ಲಾ ಹೇಳಬೇಕೊ ಅದನ್ನು ಹೇಳುತ್ತೇವೆ. ಅದಾದ ಮೇಲೆ ತಾವು ಒಪ್ಪಿಗೆ

ಕೊಡುವುದಾದರೆ, ಅದರ ವಿವರಗಳಿಗೆಲ್ಲಾ ಅವರು ಹೋಗುತ್ತಾರೆ.ವಿವರಗಳಿಗೆ ಹೋಗಬೇಕಾದಾಗ ತಾವು ಬಯಸುವವರೆಲ್ಲರೂ ಇಲ್ಲಿರುತ್ತಾರೆ.ಈಗ ಮುಖ್ಯ ಕಾರ್ಯದರ್ಶಿಗಳು, ಬೇರೆ ಕಾರ್ಯದರ್ಶಿಗಳು ಬಂದಿದ್ದಾರೆ, ಅವರು ಬರಲೇ ಬೇಕೆನ್ನುವುದಲ್ಲ, ಅವರು ಬರುವವರೆಗೆ ಸದನ ಮುಂದಕ್ಕೆ ಹಾಕಬೇಕೆಂತಲೂ ಅಲ್ಲ. ತಾವು ದಯಮಾಡಿ ಅವರ ಮನವೊಲಿಸುವುದಕ್ಕೆ ತಾವೇನು ಹೇಳಬೇಕಾಗಿದೆ ಸರ್, ತಾವು ಈಗ ಅದನ್ನು ಹೇಳಿ ,ಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಬಹಳ ವರ್ಷ, ದೀರ್ಘಕಾಲ ಅನುಭವವುಳ್ಳವರು, ಈಗ ಕಾನೂನು ಮಂತ್ರಿ ಕೂಡ ಆಗಿದ್ದೀರಿ. ಅಧಿಕಾರಿಗಳು ಬರಲೇ ಬೇಕು ಅಂತ ಏನು ಇಲ್ಲವೆನ್ನುವುದಲ್ಲ. ಮತ್ತೆ ಬರಪರಿಹಾರ ಕಾರ್ಯಕ್ರಮಗಳನ್ನು ಮಾಡುವವರ್ಯಾರು, ಅವನ್ನು ಇಂಪ್ಲಿಮೆಂಟ್ ಮಾಡುವವರ್ಯಾರು, ಆ ಕೆಲಸಗಳನ್ನೆಲ್ಲಾ ನೋಡಿಕೊಳ್ಳುವವರ್ಯಾರು, ಆ ಉಸ್ತುವಾರಿ ನೋಡಿಕೊಳ್ಳುವವರ್ಯಾರು, ಅಲ್ಲಿ-ಹಣ ಬಿಡುಗಡೆಯಾಗಿರುವುದು ಸರಿಯಾಗಿ ಖರ್ಚಾಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳುವವರ್ಯಾರು, ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೊ ಇಲ್ಲವೋ ಎಂದು ನೋಡಿಕೊಳ್ಳುವವರ್ಯಾರು, ಇಲ್ಲಿ ನಾವೇನು ಹೇಳುತ್ತೇವೆ ಅದನ್ನು ಕೇಳುವವರ್ಯಾರು, ಬರೀ ಮಂತ್ರಿಗಳೆ ಕೇಳಿಬಿಟ್ಟರೆ ಆಗುತ್ತದೆಯೆ? ಆ ತರಹ ಅವರು ಬರಲೇ ಬೇಕು ಎಂದಿಲ್ಲವೆಂದು ಹೇಳುವುದಲ್ಲ, ಅವರು ಬರಲೇ ಬೇಕು, ಅವರು ಇರಲೇ ಬೇಕು. It is their duty. ಅವರಲ್ಲಿ ಇಲ್ಲಿ ಕುಳಿತಿರಬೇಕು. ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದಾಗ ಅದನ್ನು ಕೇಳಬೇಕಾಗುತ್ತದೆ. ನಾವು, ಅಧಿಕಾರಿಗಳು ಸದನಕ್ಕೆ ಬರುವಂತಿಲ್ಲವೆಂದರೆ, ನೀವು ಮಂತ್ರಿಗಳೆಲ್ಲಾ ಇಲ್ಲಿರಬೇಕು, ಅಧಿಕಾರಿಗಳ್ಯಾರು ಬರುವುದು ಬೇಡವೆನ್ನುವುದಾದರೆ ಅವರಿಗೇನು ಕೆಲಸವಿರುತ್ತದೆ? ಆ ರೀತಿ ಹೇಳುವುದಕ್ಕೆ ಹೋಗಬೇಡಿ, ಅಧಿಕಾರಿಗಳು ಇಲ್ಲಿ ಇರಬೇಕಾಗುತ್ತದೆ.

ಶ್ರೀ ಎನ್. ಧರ್ಮ್ ಸಿಂಗ್ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಬರಪೀಡಿತ ಪ್ರದೇಶಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಹೊಂದಿದೆ ಎನ್ನುವ ಮಾತನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಕೂಡಲೇ, ತ್ವರಿತಗತಿಯಿಂದ ಅಧಿವೇಶನ ಕರೆಯಬೇಕು, ಸದನದಲ್ಲಿ , ಈ ರಾಜ್ಯದ ಜನತೆಗೆ ಏನು ತೊಂದರೆಯಾಗಿದೆ ಆ ಬಗ್ಗೆ ವಿಚಾರವಿನಿಮಯವಾಗಬೇಕೆಂಬುದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಇವತ್ತು ಈ ಸರ್ಕಾರ ಕೇವಲ ಹೇಳಿಕೆ ಆಧಾರದ

ಮೇಲೆ ಬಹಳ ದಿವಸ ಜೀವಂತವಾಗಿರುವುದಕ್ಕಾಗುವುದಿಲ್ಲ. ಇವತ್ತು ಮೊದಲು ನಮ್ಮ ರಾಜ್ಯದ ಮುಖ್ಯಮಂತ್ರಿಗಳೇನು ಪ್ರಸ್ತಾಪ ಮಾಡಿದ್ದಾರೆ, ಕರ್ನಾಟಕ ರಾಜ್ಯದ ಎಲ್ಲಾ 128 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉದ್ಭವವಾಗಿದೆ, ಕೇಂದ್ರ ಸರ್ಕಾರ ರಾಜ್ಯದ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ, ಕೇಂದ್ರದಿಂದ ಇನ್ನು ನಮಗೆ ಹಣ ಬರುತ್ತಿಲ್ಲವೆನ್ನುವ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಗೃಹ ಸಚಿವರಾದ ಶ್ರೀ ಶಿವರಾಜ್ ಪಾಟೀಲರಿಗೆ ಬರಪರಿಸ್ಥಿತಿಯ ಬಗ್ಗೆ ವಿಶೇಷವಾದ ಜವಾಬ್ದಾರಿಯನ್ನು ಕೂಡ ಪ್ರಧಾನ ಮಂತ್ರಿಗಳು ಕೊಟ್ಟಿದ್ದಾರೆ. ಆವಾಗ ಶಿವರಾಜ್ ಪಾಟೀಲ್‌ರವರು ಕೂಡ ಕರ್ನಾಟಕ ರಾಜ್ಯಕ್ಕೆ ಬಂದಿದ್ದರು. ನಾನು, ಮಾನ್ಯ ಉಪ ಮುಖ್ಯಮಂತ್ರಿಗಳು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಕಂದಾಯ ಮಂತ್ರಿಗಳು ಹಾಗೂ ಕೃಷಿ ಮಂತ್ರಿಗಳು ಕೂಡ ಜೊತೆಯಲ್ಲಿದ್ದರು. ವೈಮಾನಿಕ ಸರ್ವೆ ಮಾಡುವ ಕಾಲದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳು ಬಳ್ಳಾರಿಯಲ್ಲಿ ಏನೊ ಸಭೆ ಇದೆ ಎಂದು ಹೋದರು. ರಾಜ್ಯದಲ್ಲಿ ಗಂಭೀರವಾದಂತಹ ಬರಪರಿಸ್ಥಿತಿ ಬಂದಿದೆಯೆಂದು ಜವಾಬ್ದಾರಿಯುತ ಸ್ಥಾನದಲ್ಲಿರುವ ಕೇಂದ್ರ ಗೃಹ ಸಚಿವರು ರಾಜ್ಯಕ್ಕೆ ಬರುತ್ತಾರೆ, ವೈಮಾನಿಕ ಸರ್ವೆ ಮಾಡುವ ಸಮಯದಲ್ಲಿ, ಗೃಹ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡುವ ಸಮಯದಲ್ಲಿ ಅವರಿರಬೇಕಾಗಿತ್ತು, ಬಳ್ಳಾರಿಯಲ್ಲೇನು ಅತಿ ದೊಡ್ಡ ಕಾರ್ಯಕ್ರಮವಿರಲಿಲ್ಲ. ಕೊನೆಯದಾಗಿ ಮೂರನೇ ಮಹಡಿಯಲ್ಲಿ ಸಭೆ ನಡೆಯಿತು, ಮಾನ್ಯ ಮುಖ್ಯ ಮಂತ್ರಿಗಳು ಕೂಡ ಬಂದರು. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಬಿತ್ತನೆಯಾಗಿಲ್ಲ, ಉತ್ತರ ಕರ್ನಾಟಕದ ಬಹಳಷ್ಟು ಕಡೆ ಬರದ ಛಾಯೆ ಇದೆ ಎಂಬುದು ಶಿವರಾಜ್ ಪಾಟೀಲ್‌ರವರಿಗೆ ಮನವರಿಕೆಯಾಯಿತು. ಎಷ್ಟು ಹಣಬೇಕೆಂದು ನಾವು ಸಮಾಲೋಚನೆ ಮಾಡತಕ್ಕಂತ ಕಾಲದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ 100 ಕೋಟಿ ರೂಪಾಯಿಗಳು ಕೊಟ್ಟರೆ ಸಾಕು ಎಂದು ಅವರ ಮನಸ್ಸಿನಲ್ಲಿತ್ತು. ಆದರೆ ನಾವು ಗೃಹ ಸಚಿವರ ಮೇಲೆ ಒತ್ತಡ ತಂದಿದ್ದೇವೆ, ಅವರು 250 ಕೋಟಿ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದ್ದಾರೆ. ಇವತ್ತು ಕೇಂದ್ರದ ಸಿಆರ್‌ಎಫ್‌ನಿಂದಲೂ ಕೂಡ 113 ಕೋಟಿ ರೂಪಾಯಿಗಳು ಬಂದಿದೆ. ಒಟ್ಟಾರೆ ಹಣ ಬಂದ ಮೇಲೆ, ಸರ್ಕಾರದ ಮೇಲೆ ಆರೋಪ ಮಾಡಿ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಏತಕ್ಕೆ ಎಂದು ಹೇಳುತ್ತಿದ್ದೀರಲ್ಲ, ಸರ್ಕಾರದ ಮೇಲೆ ಗಂಭೀರವಾದ ಆರೋಪ ಏನಿದೆ ಎಂದರೆ, ಕೇಂದ್ರದಿಂದ ಬಂದಂತಹ ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತಾವು ಸ್ವೀಕಾರ ಮಾಡಿದ್ದೀರೆಂದು ಹೇಳಿದ ಮೇಲೆ, ಅವರು ಇದರ ಎಲ್ಲಾ ವಿವರಗಳನ್ನು ಹೇಳಲಿ ಸರ್.

ಶ್ರೀ ಎನ್. ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ವಿವರವನ್ನು ಏತಕ್ಕೆ ಹೇಳಬೇಕಾಗಿತ್ತೆಂಬುದು ತಮಗು ಕೂಡ ಗೊತ್ತು, ಇಲ್ಲಿಂದ ಮಾತನಾಡಿದ್ದೀರಿ, ಅಲ್ಲಿಂದ ಮಾತನಾಡಿದ್ದೀರಿ, ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದೀರಿ. ಇವತ್ತು ಅಧ್ಯಕ್ಷರಿಗೆ ಏನು ಹೇಳುತ್ತಿದ್ದೇವೆಂದರೆ, ನಾವು ಗಂಭೀರವಾದ ಆರೋಪವನ್ನು ಸರ್ಕಾರದ ಮೇಲೆ ಮಾಡುತ್ತಿದ್ದೇವೆ, ಅದಕ್ಕೆ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು. Government has utterly failed. ಇವತ್ತು ಏನಾಗಿದೆ ಎಂದರೆ, ಮನಮೋಹನ್ ಸಿಂಗ್ ಮತ್ತು ಶರದ್ ಪವಾರ್ ರವರು ವಿದರ್ಭಕ್ಕೆ ಬಂದರು, ವಿದರ್ಭ ಪ್ಯಾಕೇಜ್ ಇದೆ, ಈ ಎಲ್ಲಾ ಹಣವನ್ನು ನೀವು ಖರ್ಚು ಮಾಡಿಲ್ಲವೆನ್ನುವ ರೀತಿಯಲ್ಲಿ, ಚರ್ಚೆ ರೂಪದಲ್ಲಿ ಅಲ್ಲ, ಗಂಭೀರವಾದ ಆರೋಪವನ್ನು ಇವತ್ತು ನಾವು ಮಾಡುತ್ತಿದ್ದೇವೆ, ಅದಕ್ಕೆ ತಾವು ಅನುಮತಿ ಕೊಡಬೇಕು ಎಂದು ಕೇಳತಕ್ಕತಂತಹ ರೀತಿಯಲ್ಲಿ ನಾನು ಪೀಠಿಕೆಯಲ್ಲಿ ಮಾತನಾಡುತ್ತಿದ್ದೇನೆ. ಇದಕ್ಕೆ ಅನುಮತಿಯನ್ನು ಕೊಟ್ಟರೆ ಚರ್ಚೆಯಲ್ಲಿ ನಮ್ಮ ಹಿರಿಯ ಸದಸ್ಯರೆಲ್ಲರು ಭಾಗವಹಿಸುತ್ತಾರೆ. ಅದಕ್ಕೆ ನಾವು ಸದನದಲ್ಲಿ ಗಭೀರವಾದ ಆರೋಪ ಮಾಡುತ್ತಿದ್ದೇವೆ. ಆರೋಪ ಏತಕ್ಕೆ ಮಾಡುತ್ತಿದ್ದೇವೆಂದರೆ, ಇವತ್ತು ಏನು ಕೆಲಸಕಾರ್ಯಗಳು ನಡೆಯುತ್ತಿಲ್ಲ. ನಾನು ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿದ್ದೇನೆ. ರಾಜ್ಯದ ಮುಖ್ಯ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಯವರಿಗೆ ನಾನು ಪತ್ರವನ್ನು ಬರೆದಿದ್ದೇನೆ, ಇವತ್ತು ಬರಪರಿಸ್ಥಿತಿಯ ಬಗ್ಗೆ ಏನು ಕೆಲಸ ಮಾಡಿದ್ದಾರೆನ್ನುವ ಬಗ್ಗೆ ಒಬ್ಬರು ಉತ್ತರವನ್ನು ಕೊಡುತ್ತಿಲ್ಲ, ಅಂಜುತ್ತಿದ್ದೀರಿ. ನಾನು ಮುಖ್ಯ ಮಂತ್ರಿಯಾಗಿದ್ದೆ, ತಾವು ಉಪ ಮುಖ್ಯಮಂತ್ರಿಯಾಗಿದ್ದೀರಿ, ಸಿದ್ಧರಾಮಯ್ಯನವರು ಕೂಡ ಉಪ ಮುಖ್ಯಮಂತ್ರಿಯಾಗಿದ್ದರು. ಎಂದೂ ಕೂಡ ವಿರೋಧಪಕ್ಷದವರಿಗೆ ಎಲ್ಲಾ ರೀತಿಯ ಮಾಹಿತಿ ಕೊಡುವುದಕ್ಕೆ ಅಡ್ಡಬಂದಿಲ್ಲ. ಇದು ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ಇನ್ನು ಕೂಡ ಕಂದಾಯ ಮಂತ್ರಿಗಳಿಂದ ಉತ್ತರ ಬರುತ್ತಿಲ್ಲ. ಅಲ್ಲಿ ನಿಖರವಾಗಿ ಮಾಹಿತಿಯನ್ನು ಕೊಡಲೇಬಾರದೆನ್ನುವ ರೀತಿಯಲ್ಲಿ ಹೇಳಿದ್ದಾರೆ. ಇವತ್ತು ಯಾರಿಗಾದರು ಬಂದಿದೆಯೇ? ನೀವು

(ವಾಟಾಳ್ ನಾಗರಾಜ್) ಪತ್ರ ಬರೆದಿದ್ದೀರಾ, ಮಾಹಿತಿ ಬಂದಿದೆಯೇ? ಮಾನ್ಯ ವಾಟಾಳ್ ನಾಗರಾಜ್ ರವರು ಪತ್ರ ಬರೆಯುವುದಕ್ಕು ಹೋಗುವುದಿಲ್ಲ ಕೇಳುವುದಕ್ಕು ಹೋಗುವುದಿಲ್ಲ. ನನಗೆ ಇನ್ನು ಕಂದಾಯ ಕಾರ್ಯದರ್ಶಿಯವರಿಂದ ಮಾಹಿತಿ ಬಂದಿಲ್ಲ. ಇವತ್ತು ಏನಾಗುತ್ತಿದೆ ಎಂದರೆ, ಕೇಂದ್ರದಿಂದ ಬಂದಂತಹ ಹಣ ಉಪಯೋಗವಾಗುತ್ತಿಲ್ಲ, ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಡನೆ ಸಮಾಲೋಚನೆ ನಡೆಯುತ್ತಿಲ್ಲ, ರಿವ್ಯೂ ಮೀಟಿಂಗ್ ಆಗುತ್ತಿಲ್ಲ. ಪ್ರವಾಹಪೀಡಿತ ಪ್ರದೇಶಕ್ಕೆ ನಾವು ನೀವು ಕೂಡಿ ಮೂರು ಸಲ ಹೋಗಿ ಬಂದಿದ್ದೇವೆ, ಆವಾಗ ಕಳೆದ ಸಾರಿ 315 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಎಲ್ಲಾ ಹಣವನ್ನು 5 ಜಿಲ್ಲೆಗಳಿಗೆ ಖರ್ಚು ಮಾಡಿದ್ದೇವೆ. ಇವತ್ತು ಒಂದು ಕಡೆ ಕೂಡ ಕೆಲಸವಾಗುತ್ತಿಲ್ಲ, ನೀವು ಎಲ್ಲಾ ಕಡೆ, ನಾವು ತಯಾರಾಗಿದ್ದೇವೆಂದು ಹೇಳಿಕೊಳ್ಳುತ್ತಾ ಹೋಗುತ್ತಿದ್ದೀರಿ, ನಿಮ್ಮ ವ್ಯವಹಾರಗಳನ್ನು ಯಾರು ಬಗೆಹರಿಸುವುದಕ್ಕಾಗುವುದಿಲ್ಲ. ದಿವಸವು ಮಾನ್ಯ ಕುಮಾರಸ್ವಾಮಿ, ಯಡಿಯೂರಪ್ಪನವರು ಏನು ಹೇಳಿಕೆಯನ್ನು ಕೊಡುತ್ತಾರೆ, ಆ ದ್ವಂದ್ವ ಹೇಳಿಕೆಯಿಂದ ಇವತ್ತು ಜನರು ಬೇಸತ್ತು ಹೋಗಿದ್ದಾರೆ. ನಾನು ಅದನ್ನು ಪ್ರಶ್ನಿಸಲು ನಿಂತಿಲ್ಲ, ಅದರಿಂದ ನೀವು ಜನಾಭಿಪ್ರಾಯವನ್ನು ಮೂಡಿಸುವುದಕ್ಕಾಗುವುದಿಲ್ಲ, ಚುನಾವಣೆ ಬಂದಾಗ ನೋಡುತ್ತೇವೆ ಎನ್ನುವ ರೀತಿಯಲ್ಲಿ ನೀವು ಹೇಳುವುದಕ್ಕಾಗುವುದಿಲ್ಲ. ನಾವೇನು ಕೇಳುತ್ತಿದ್ದೇವೆಂದರೆ, ಇವತ್ತು ಜನರ ಸಹಾಯಕ್ಕೆ ಬನ್ನಿ, ರೈತರ ಸಹಾಯ ಕ್ಕೆ ಬನ್ನಿ. ರೈತರ ಸಮಸ್ಯೆಗಳನ್ನು ಬಗೆಹರಿಸತಕ್ಕಂತಹ ರೀತಿಯಲ್ಲಿ ನಮ್ಮ ಸರ್ಕಾರ ಎಲ್ಲಾ ದೃಷ್ಟಿಯಿಂದ ಸಹಾಯ ಮಾಡುತ್ತದೆ ಎನ್ನುವ ರೀತಿಯಲ್ಲೇನು ಬೆನ್ನನ್ನು ತಟ್ಟಿಕೊಳ್ಳುತ್ತಿದ್ದೀರಲ್ಲ, ಇವತ್ತು ತಾವು ಯಾವ ಕೆಲಸವನ್ನೂ ಕೂಡ ಕರ್ನಾಟಕ ರಾಜ್ಯದಲ್ಲಿ ಮಾಡುತ್ತಿಲ್ಲ. ಹಣವನ್ನು ಕೂಡ ಬಿಡುಗಡೆ ಮಾಡುತ್ತಿಲ್ಲ, ಅದಕ್ಕೆ ನಾವು ನಿಲುವಳಿ ಸೂಚನೆಯ ಮುಖಾಂತರ ಈ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು, ಅಧ್ಯಕ್ಷರು ನಮಗೆ ಅನುಮತಿಯನ್ನು ಕೊಟ್ಟರೆ ಪೂರ್ಣ ಪ್ರಮಾಣದ ವಿವರವನ್ನು ಈ ಬಗ್ಗೆ ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇವೆ. ಅದಕ್ಕೆ ಇವತ್ತು ಚರ್ಚೆಯಾಗಬೇಕು, ಚರ್ಚೆಯಾಗದೆ ಯಾರಿಗೆ ಹೇಳಬೇಕು? ತಾವು ಕೂಡ [ಎಂ.ಪಿ.ಪ್ರಕಾಶ್] ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಏನೋ ಅಕಸ್ಮಾತ್ ಆಗಿ ತಾವು ಇವತ್ತು ಗೃಹ ಸಚಿವರು ಮತ್ತು ಸಂಸದೀಯ

3.30 PM

ವ್ಯವಹಾರಗಳ ಸಚಿವರಾಗಿದ್ದೀರಿ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಆಗಲೂ ಆಕಸ್ಮಿಕವಾಗಿ ಉಪ ಮುಖ್ಯಮಂತ್ರಿಯಾಗಿದ್ದೆ. ಮಾನ್ಯ ಸಿದ್ದರಾಮಯ್ಯನವರು ಹೊರಗೆ ಹೋಗದಿದ್ದರೆ ಆಗಲೂ ಚಾನ್ಸ್ ಸಿಗುತ್ತಿರಲಿಲ್ಲ.

ಶ್ರೀ ಎಸ್. ಸಿದ್ದರಾಮಯ್ಯ:ನಾನು ನಿಮಗೆ ಉಪ ಮುಖ್ಯ ಮಂತ್ರಿ ಪಟ್ಟ ಸಿಗಲೆಂದೇ ಹೊರಗಡೆ ಹೋಗಿದ್ದು.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, 2004ರ ನಂತರ ಎಲ್ಲಾ ಆಕಸ್ಮಿಕವಾಗಿಯೇ ಆಗುತ್ತಿರುವುದು. 120ಕ್ಕೂ ಹೆಚ್ಚು ಸೀಟ್ ಯಾರೂ ತೆಗೆದುಕೊಳ್ಳದೆ ಇರುವುದರಿಂದ 2004 ರಚುನಾವಣೆ ನಂತರ ಎಲ್ಲ ಆಕಸ್ಮಿಕವಾಗಿಯೇ ಆಗುತ್ತಿರುವುದು.

(ಗೊಂದಲ)

ಶ್ರೀ ಎನ್. ಚೆಲುವರಾಯ ಸ್ವಾಮಿ:ನೀವು ಎರಡೂ ಕಡೆಯೂ ಇದ್ದೀರಿ. ನನ್ನ ಕಾಲದಲ್ಲಿಯೂ ಇದ್ದಿರಿ, ಈಗಲೂ ಇದ್ದೀರಿ. ನೀವು ಬಹಳ ನಿಪುಣರಾಗಿದ್ದೀರಿ.

(ಗೊಂದಲ)

ಶ್ರೀ ಎನ್. ಚೆಲುವರಾಯ ಸ್ವಾಮಿ: ನಿಮ್ಮ ಹತ್ತಿರವೇ ಕಲಿತದ್ದು ನಾನು.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾದಾಗ ನೀವು ಮಂತ್ರಿಯಾಗಿ ಇರುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪ್ರಕಾಶ್ ಆ ವಿಚಾರದಲ್ಲಿ ಮೌನ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುವುದು ನಿಜವೇ?

ಶ್ರೀ ಎಸ್. ಸಿದ್ದರಾಮಯ್ಯ: ಮಾನ್ಯ ಪ್ರಕಾಶ್ ಹೇಳುವುದಕ್ಕಾಗುವುದಿಲ್ಲ. ಅಗ್ರಿಮೆಂಟ್ ಆದಾಗ ಪ್ರಕಾಶ್ ಇರಲಿಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಯಡಿಯೂರಪ್ಪನವರಿಗೆ ಖಂಡಿತ ಮುಖ್ಯಮಂತ್ರಿ ಮಾಡುತ್ತೇವೆ. ನೀವು ಬೇಜಾರು ಮಾಡಿಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್: ನಮಗೇಕೆ ಬೇಜಾರಾಗುತ್ತದೆ, ನಮಗೆ ಖುಷಿ. ಈಗ ಆಗುತ್ತೀರೋ ಇಲ್ಲವೋ ಎನ್ನುವ ಅನುಮಾನ.

ಶ್ರೀ ಎನ್. ಧರ್ಮ್‌ಸಿಂಗ್: ಸುಮ್ಮನೆ ಹುಡುಗಾಟಿಕೆ ಮಾತನ್ನು ಏಕೆ ಹೇಳುತ್ತಿದ್ದೀರಿ, ಮಾನ್ಯ ಯಡಿಯೂರಪ್ಪನವರಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ

ಮಾಡುವುದಕ್ಕೆ ಬಿಡುವುದಿಲ್ಲ. ಅದಕ್ಕೆ ಎರಡು ಗ್ರಹಗಳಿವೆ. ಅವು ಯಾವುವು ಎಂದು ಸಮಯ ಬಂದಾಗ ಹೇಳುತ್ತೇನೆ. ನಾನು ಗುಲ್ಬರ್ಗದಲ್ಲಿ ಹೇಳಿದ್ದೇನೆ. ಎರಡು ಗ್ರಹಗಳು ಎಂದೂ ಯಡಿಯೂರಪ್ಪನವರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಬುಧ ಗ್ರಹನೋ ಶುಕ್ರ ಗ್ರಹನೋ ಎಂದು ಹೇಳಿದರೆ ಸರಿ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಧರ್ಮ್‌ಸಿಂಗ್‌ರವರು ಗ್ರಹಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಯಾವ ಗ್ರಹ ಎಂದು ಹೇಳಿದರೆ ಚೆನ್ನಾಗಿ ಇರುತ್ತದೆ.

ಅಧ್ಯಕ್ಷರು: ಬರದ ಬಗ್ಗೆ ಮಾತನಾಡಲಿ ಬಿಡಿ. ಬರ ಮರೆತೇ ಬಿಟ್ಟಿರಲ್ಲ. ರೈತರ ಬರ ಮರೆತು ಎಲ್ಲಿಗೋ ಹೋಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಗುಲ್ಬರ್ಗದಲ್ಲಿ ಗ್ರಹಗಳ ಬಗ್ಗೆ ನೀವು ಹೇಳಿದ ಮೇಲೆ ಇಲ್ಲಿಯೂ ಹೇಳಿ.

ಶ್ರೀ ಎನ್. ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ನಾನೇನು ನಿಲುವಳಿ ಸೂಚನೆ ತರುತ್ತಿದ್ದೇನೆ, ಇನ್ನೂ ಕೂಡ ನಾಯಕರು ಇದರ ಬಗ್ಗೆ ಮಾತನಾಡುವವರಿದ್ದಾರೆ. ಇದು ಒಂದು ದೀರ್ಘವಾದ ಚರ್ಚೆ. ಕೇಂದ್ರದಿಂದ ಬರತಕ್ಕಂತಹ ಹಣವನ್ನು ಎಷ್ಟರ ಮಟ್ಟಿಗೆ ಖರ್ಚು ಮಾಡುತ್ತಿದ್ದಾರೆ, ವಿಧರ್ಭ ಪ್ಯಾಕೇಜ್‌ನಲ್ಲಿ 2689ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಸರ್ಕಾರ ಬಂದ ಮೇಲೆ 172 ರೈತರ ಆತ್ಮಾಹುತಿ ಆಗಿದೆ. ಜನವರಿ ತಿಂಗಳಲ್ಲಿ ಕೂಡ 30 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಇವತ್ತಿನದಿವಸ ಕೆಲಸಕಾರ್ಯಗಳು ಆಗಬೇಕಾಗಿದೆ. ನಾನು ಇವತ್ತು ಕಂದಾಯ ಮಂತ್ರಿಗಳ ಮೇಲೆ ನೇರವಾಗಿ ಆಕ್ಷೇಪಣೆ ಮಾಡುತ್ತಿಲ್ಲ. ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ನಿಮ್ಮ ಆದೇಶವನ್ನು ಕರ್ನಾಟಕ ರಾಜ್ಯದ ಅಧಿಕಾರಿಗಳು ಯಾರೂ ಕೂಡ ಪಾಲನೆ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳು ಆದೇಶಗಳನ್ನು ಪಾಲನೆ ಮಾಡುತ್ತಿಲ್ಲ. ಉದ್ಯೋಗ ಭರವಸೆ ಯೋಜನೆಯಲ್ಲಿ ಕಮಿಟ್‌ಮೆಂಟ್ ಇಲ್ಲ. ನನ್ನ ಜೇವರ್ಗಿ ತಾಲ್ಲೂಕಿನಲ್ಲಿ 14,000 ಜನ ರೈತರು ಕೆಲಸ ಮಾಡಿದ್ದಾರೆ. There they have spent Rs. 2 crore. ಪ್ರತಿಯೊಂದು ತಾಲ್ಲೂಕಿನಲ್ಲಿ ಉದ್ಯೋಗ ಭರವಸೆ ಯೋಜನೆ ಇದೆ. ಎಲ್ಲ ಯೋಜನೆಗಳಿಗೂ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. Employment Guarantee Scheme ಏನಿದೆ ಇಡೀ ರಾಷ್ಟ್ರದಲ್ಲಿ

ಶ್ರೀ ಮನಮೋಹನ್ ಸಿಂಗ್‌ರವರು ಮತ್ತು UPA chairman ಆದ ಶ್ರೀಮತಿ ಸೋನಿಯಾ ಗಾಂಧಿಯವರು ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಒತ್ತು ಕೊಟ್ಟು ಹಣ ಕೊಟ್ಟಿದ್ದಾರೆ.ಇಂತಹ ಹಣ ಉಪಯೋಗ ಮಾಡತಕ್ಕಂತಹ ರೀತಿಯಲ್ಲಿ ಸರ್ಕಾರ you have failed in all this. ಸುಮ್ಮನೆ ನೀವು ಪತ್ರಿಕೆ ಮುಖಾಂತರ ಭಾಷಣಗಳನ್ನು ಮಾಡುತ್ತಿದ್ದೀರಿ. ಇವತ್ತು ಜನಾಭಿಪ್ರಾಯ ಪಡೆದ ಸರ್ಕಾರ ಕರ್ನಾಟಕ ರಾಜ್ಯದಲ್ಲಿಲ್ಲ. ಬದ್ದತೆ ಇಲ್ಲ. ಯಾವುದಾದರೂ ಸರ್ಕಾರಕ್ಕೆ ಈ ರಾಜ್ಯದಲ್ಲಿರತಕ್ಕಂತಹ ಬಡವರಿಗೆ ಸಹಾಯ ಮಾಡತಕ್ಕಂಥದ್ದು, You must have that commitment ಅಧಿಕಾರಿಗಳು ಕೂಡ ಅದೇ ರೀತಿಯಿಂದ ಕಮಿಟ್‌ಮೆಂಟ್‌ನಿಂದ ಕೆಲಸ ಮಾಡಬೇಕಾಗುತ್ತದೆ. ಅದು ಆಗುತ್ತಿಲ್ಲ. ನಾನು ವಿವರಗಳಿಗೆ ಹೋಗುವುದಕ್ಕೆ ಇಚ್ಛೆ ಪಡುವುದಿಲ್ಲ. ಇವತ್ತು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಇದಕ್ಕೆ ತಾವು ಒಪ್ಪಿ, ಇದರ ಬಗ್ಗೆ ಚರ್ಚೆಯಾಗಲಿ, ಚರ್ಚೆಗೆ ಸರ್ಕಾರದಿಂದ ಸರಿಯಾದ ರೀತಿಯಲ್ಲಿ ಉತ್ತರ ಸಿಗಲಿ, ಮತ್ತು ರಾಜ್ಯದ ಜನತೆಗೆ ಸರ್ಕಾರದ ಕೆಲಸಕಾರ್ಯಗಳ ವೈಖರಿ ತಿಳಿಸತಕ್ಕಂತಹ ಪ್ರಯತ್ನವನ್ನು ಕೂಡ ಮಾಡಬೇಕಾಗಿದೆ. ತಾವು ಇದಕ್ಕೆ ಪರವಾನಗಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ತಾವು ಪರವಾನಗಿ ಕೊಟ್ಟರೆ ನಾವು ನಮ್ಮ ವಿಚಾರಗಳನ್ನು ತಮ್ಮ ಮುಂದಿಡುತ್ತೇವೆ. ಇದನ್ನು ತಳ್ಳಿ ಹಾಕಿ ಬೇರೆ ಯಾವುದೇ ರೂಪದಲ್ಲಿ ಪರಿವರ್ತನೆ ಮಾಡಿ ತರಬಾರದು, ನಿಲುವಳಿ ಸೂಚನೆ ಮುಖಾಂತರ ಇವತ್ತು ಸದನದಲ್ಲಿ ಚರ್ಚೆಯಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂತಹ ವಿಷಯವನ್ನು, With regard to the admissibility itself I am representing for that ಅವರ ಮನವೊಲಿಸುತ್ತೀರಾ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಹೌದು, Exactly. Sir, the practice is, couple of us, we make the submission.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, Without going into the merits of the Motion, if you are trying to convince him to accept this particular Adjournment Motion, I have no objection. ನಿಮ್ಮ ಲೀಡರ್ ಹೇಳಿರುವುದರಿಂದ ತಾವು ಮಾತನಾಡುವುದಿಲ್ಲವೆಂದು ತಿಳಿದಿದ್ದೆ. ಯಾರ್‍ಯಾರು ಸಹಿ ಹಾಕಿರುತ್ತಾರೆ ಅವರು ಚರ್ಚೆಯಲ್ಲಿ ಭಾಗವಹಿಸುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ: ತಾವು Adjournment Motionಗೆ ಒಪ್ಪಿಕೊಂಡರೆ ಅಡ್ಡಿ ಇಲ್ಲ.

ಶ್ರೀ ಎಸ್. ಸಿದ್ದರಾಮಯ್ಯ: ನೀವು ಒಪ್ಪಿಕೊಂಡರೆ ಯಾರೂ preliminary submission ಮಾಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು preliminary submission ಮಾಡಿದ್ದಾರೆ. ಇನ್ನು ಒಬ್ಬರು ಇಬ್ಬರು ಮಾತನಾಡಿ. ನಿಯಮಾವಳಿಗಳಲ್ಲಿ ಮೂರು ಜನರಿಗೆ ಅವಕಾಶ ಕೊಡಬೇಕೆಂದು ಇದೆ. ಇನ್ನಿಬ್ಬರು ಮಾತನಾಡಿ, just convince me.

ಶ್ರೀ ಆರ್.ವಿ. ದೇಶಪಾಂಡೆ(ಹಳಿಯಾಳ): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಈ ನಿಲುವಳಿ ಸೂಚನೆಯನ್ನು ಏಕೆ ತರಬೇಕೆಂಬ ಬಗ್ಗೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಮಾತು ನೋಡಿದರೆ ತಾವು ಕನ್‌ವಿನ್ಸ್ ಆದ ಹಾಗೆ ಕಾಣುತ್ತಿದೆ. ಮುಖ್ಯವಾಗಿ ಬರಗಾಲ ಈ ರಾಜ್ಯಕ್ಕೆ ಹೊಸದೇನೂ ಅಲ್ಲ. ಅತೀವೃಷ್ಟಿಯೂ ಸಹ ರಾಜ್ಯಕ್ಕೆ ಹೊಸದಲ್ಲ. ಪ್ರತಿ ವರ್ಷ ರಾಜ್ಯದ ಕೆಲವು ಭಾಗಗಳಲ್ಲಿ ಅತೀವೃಷ್ಟಿ ಆಗುತ್ತದೆ, ಬರಗಾಲ ಬರುತ್ತದೆ. ಆದರೆ ಇವತ್ತು ದುರ್ದೈವದಿಂದ ಒಂದು ಕಡೆ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಹೇಳುತ್ತಾರೆ, ನಮ್ಮಲ್ಲಿ ಹಣದ ಕೊರತೆ ಇಲ್ಲ, ಎಷ್ಟು ಬೇಕು ಅಷ್ಟು ಹಣ ಕೊಡುತ್ತೇವೆಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುತ್ತಾರೆ, ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ. ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುವುದು Central Calamity Relief Fund ನಿಂದ. ನಮ್ಮ 12ನೇ ಹಣಕಾಸಿನ ಆಯೋಗದ ನಿರ್ಧಾರದ ಪ್ರಕಾರ ಕರ್ನಾಟಕಕ್ಕೆ 124ಕೋಟಿ ರೂಪಾಯಿಗಳು ಬರಬೇಕು. ಅದರಲ್ಲಿ ಶೇಕಡ 75ರಷ್ಟು ಭಾಗ ಕೇಂದ್ರ ಸರ್ಕಾರ ಕೊಡುತ್ತದೆ, 25 ಭಾಗ ರಾಜ್ಯ ಸರ್ಕಾರ ಕೊಡಬೇಕು. ಈ ಹಣ ಅಕ್ಟೋಬರ್ 2000 ರಲ್ಲಿ ಹಣ ಬಂದಿದೆ. ಅಂದಾಜು 92 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರ ನಂತರ ಮತ್ತೊಂದು National Calamity Contingency Fund ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಸಹ ದೆಹಲಿಗೆ ಹೋಗಿ ಬಂದರು, ನಮ್ಮ ಪಕ್ಷದ ಅಧ್ಯಕ್ಷರಾದ ಖರ್ಗೆ ಸಾಹೇಬರು, ವಿರೋಧ

ಪಕ್ಷದ ನಾಯಕರಾದ ಮಾನ್ಯ ಧರ್ಮ್‌ಸಿಂಗ್‌ರವರು ಸಹ ದೆಹಲಿಗೆ ಹೋಗಿ ಕೇಂದ್ರ ಸರ್ಕಾರಕ್ಕೆ ಕನ್‌ವಿನ್ಸ್ ಮಾಡಿ ಕೇಂದ್ರ ಸರ್ಕಾರದಿಂದ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. National Calamity Contingency Fund ಏನಿದೆ ಅದು ಕೇಂದ್ರ ಸರ್ಕಾರದ ಡಿಸ್ಕ್ರಿಷನ್. ಆದರೆ ಇಲ್ಲಿಯ ಅತೀವೃಷ್ಟಿ ಮತ್ತು ಬರಗಾಲದ ಗಂಭೀರತೆಯನ್ನು ನೋಡಿಕೊಂಡು ಕೇಂದ್ರ ಸರ್ಕಾರದವರು 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಅದರಲ್ಲಿ 226 ಕೋಟಿ NCCFನಿಂದ ಕೊಟ್ಟರು. Advance ಆಗಿ ಪುನ: CRFನಲ್ಲಿ ಸುಮಾರು 24 ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟರು. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಟ್ಟು 374 ಕೋಟಿ ರೂಪಾಯಿಗಳು ಬಂದಿವೆ. ಇವತ್ತು ಮಾನ್ಯ ಮುಖ್ಯಮಂತ್ರಿ ಗಳು ಮಾನ್ಯ ಗೃಹ ಸಚಿವರು ಮಾನ್ಯ ಕಂದಾಯ ಸಚಿವರು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ. ಗಾಂಭೀರ್ಯತೆ ಇದೆ. ರೈತರು ಕಷ್ಟದಲ್ಲಿದ್ದಾರೆ. ವಿದ್ಯುಚ್ಛಕ್ತಿ ಇಲ್ಲ. ರಸ್ತೆಗಳು ಹಾಳಾಗಿವೆ, ಕುಡಿಯುವುದಕ್ಕೆ ನೀರಿಲ್ಲ, ಆದರೆ ultimately ಏನಾಗಿದೆ, ಕೇಂದ್ರ ಸರ್ಕಾರದಿಂದ 374 ಕೋಟಿ ರೂಪಾಯಿಗಳು ಬಿಡುಗಡೆ ಆದರೂ ಸಹ ರಾಜ್ಯ ಸರ್ಕಾರದಿಂದ ಜನವರಿ 10ರವರೆಗೆ ಬಿಡುಗಡೆ ಆಗಿರುವ ಹಣ ಕೇವಲ 252 ಕೋಟಿ ರೂಪಾಯಿಗಳು ಮಾತ್ರ. ಒಂದು ರೂಪಾಯಿ ಕೂಡ ರಾಜ್ಯ ಸರ್ಕಾರದವರು ಬಿಡುಗಡೆ ಮಾಡಿಲ್ಲ ಕೇಂದ್ರ ಸರ್ಕಾರದಿಂದ ಹಣ ಬಂತು. ಆದರೂ ಅದೂ ಸಹ ಎಲ್ಲಾ ಹಣ ಬಿಡುಗಡೆಯಾಗಲಿಲ್ಲ. ನಿನ್ನೆ ಮೊನ್ನೆ ತಾವು 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎಂದು ಗೊತ್ತಾಗಿದೆ. ಹಾಗಾದರೂ ಸಹ ಟೋಟಲಿ 352 ಕೋಟಿ ರೂಪಾಯಿಗಳಾಗುತ್ತದೆ. ಇನ್ನೂ ನಿಮ್ಮ ಕಡೆ 22 ಕೋಟಿ ರೂಪಾಯಿಗಳು ಉಳಿದಿವೆ. ಒಂದು ಕಡೆ ಹಣ ಬಿಡುಗಡೆಯನ್ನು ನೀವು ಮಾಡಿದರೂ ಸಹ ಎಷ್ಟು ಹಣ ಖರ್ಚಾಗಿದೆ, ಎಷ್ಟು ಉದ್ಯೋಗಾವಕಾಶ ಸೃಷ್ಟಿಯಾಗಿದೆ, ಕುಡಿಯುವ ನೀರಿನ ಅಭಾವ ಎಷ್ಟು ಕಡೆ ಇತ್ತು ಮತ್ತು ಈಗ ಎಷ್ಟು ಕಡೆ ಕುಡಿಯುವ ನೀರಿನ ಅಭಾವ ಕಡಿಮೆಯಾಗಿದೆ, ಯಾರು ಇವುಗಳ ಬಗ್ಗೆಯೆಲ್ಲಾ ಮಾನೀಟರ್ ಮಾಡಿದ್ದಾರೆ ಹೇಳಿ. ಮಾನ್ಯ ಖರ್ಗೆ ಸಾಹೇಬರು ಹಿಂದೆ ಕ್ಯಾಬಿನೆಟ್ ಸಬ್ ಕಮಿಟಿ ಛೇರ್ಮನ್ ಆಗಿದ್ದಾಗ ಆ ಕ್ಯಾಬಿನೆಟ್ ಸಬ್ ಕಮಿಟಿ ಇಡೀ ರಾಜ್ಯದ ಪೂರ್ತಿ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿಶಾಸಕರ ಜೊತೆ, ಜನ ಪ್ರತಿನಿಧಿಗಳ ಜೊತೆ, ರೈತರ ಜೊತೆ ಚರ್ಚೆ ಮಾಡಿ ಅಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಇಂಥಿಂಥ ಕೆಲಸಗಳನ್ನು ಮಾಡಬೇಕೆಂದು

ಆದೇಶವನ್ನು ಕೊಟ್ಟಿದ್ದರು. ನಾನು ಈಗ ನಿಮ್ಮನ್ನು ಕೇಳಬಯಸುತ್ತೇನೆ. ಮಾನ್ಯ ಗೃಹ ಸಚಿವರು ಅಧ್ಯಕ್ಷರಾಗಿರುವ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ತಾವು ಇದುವರೆಗೆ ಎಷ್ಟು ಕಡೆ ಹೋಗಿದ್ದೀರಿ? ಎಷ್ಟು ಜಿಲ್ಲೆಗಳಿಗೆ ತಾವು ಭೇಟಿಯನ್ನು ಕೊಟ್ಟಿರಿ? ಎಷ್ಟು ಜಿಲ್ಲೆಗಳಲ್ಲಿ ತಾವು ಜಿಲ್ಲಾಧಿಕಾರಿಗಳಿಗೆ ಈ ಪ್ರಕಾರವಾಗಿ ಕೆಲಸ ಮಾಡಬೇಕೆಂದು ಡೈರಕ್ಷನ್ಸ್ ಕೊಟ್ಟಿರಿ? ಯಾವುದೂ ಇಲ್ಲ. ಏಕೆಂದರೆ ಸರ್ಕಾರದಲ್ಲಿ ಯಾವುದೇ ತರಹದ ಸೀರಿಯಸ್‌ನೆಸ್ ಇಲ್ಲವಾಗಿದೆ. Drought ಬಿದ್ದರೆ ಬೀಳಲಿ, ಮಾನ್ಯ ಕಂದಾಯ ಸಚಿವರೆ, ತಾವು ನನಗೆ ಹೇಳಿ. ಎಷ್ಟು ಜಿಲ್ಲೆಗಳಿಗೆ ತಾವು ಭೇಟಿ ಕೊಟ್ಟಿರಿ?

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದೆನಲ್ಲಾ.

ಶ್ರೀ ಆರ್.ವಿ.ದೇಶಪಾಂಡೆ: ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದೀರಿ. ನಾನು ಇಲ್ಲ ಎಂದು ಹೇಳಲಿಲ್ಲ. ತಾವು ಒಟ್ಟು ಎಷ್ಟು ಜಿಲ್ಲೆಗಳಿಗೆ ರಾಜ್ಯದಲ್ಲಿ ಭೇಟಿ ಕೊಟ್ಟಿರಿ ಎಂದು ಕೇಳುತ್ತಿರುವುದು. ಅದಕ್ಕೆ ಉತ್ತರ ಕೊಡುವಾಗ ತಾವು ಹೇಳಬಹುದು. ಉತ್ತರ ಕನ್ನಡ ಜಿಲ್ಲೆಗೆ ತಾವು ಬಂದಿಲ್ಲವೆಂದು ನಾನು ಹೇಳುತ್ತಿಲ್ಲ. ಸರ್ಕಾರದಲ್ಲಿರುವ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಸಚಿವರು, ಕಂದಾಯ ಇಲಾಖಾ ಕಾರ್ಯದರ್ಶಿಗಳು ಎಷ್ಟು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ? ಎಷ್ಟು ಕಡೆ ರಿವ್ಯೂ ಆಗಿದೆ ಎಂಬ ಬಗ್ಗೆ ನಮಗೆ ಗೊತ್ತಾಗಬೇಕಲ್ಲ. ಸರ್ಕಾರ ಏನು ಪ್ರೆಸ್ ಮುಖಾಂತರ ಸೀರಿಯಸ್‌ನೆಸ್ ಬಗ್ಗೆ, ರೈತರಿಗೆ ತೊಂದರೆ ಆಗಿರುವ ಬಗ್ಗೆ ಹೇಳುತ್ತಿದೆ ಅದು ನಿಜ. ರೈತರಿಗೆ ತೊಂದರೆ ಆಗಿರುವುದು ನಿಜ. ಆದರೆ ಅವುಗಳನ್ನು ಪರಿಹರಿಸಲು ಹಾಕಿಕೊಂಡಿರುವ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯರೂಪದಲ್ಲಿ ತರಲು ನೀವು ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ಬಗ್ಗೆ ಏನು ನಿಮ್ಮ ಕಾರ್ಯಕ್ರಮ.? ಕಳೆದ ಏಳೆಂಟು ತಿಂಗಳಲ್ಲಿ ಏನೇನು ನೀವು ಮಾಡಿದಿರಿ? ಮಾನಿಟರಿಂಗ್ ಇಲ್ಲಾ, ತಾವು ಹಣ ಬಿಡುಗಡೆ ಮಾಡುತ್ತೀರಿ, ನಾವು 25 ವರ್ಷದಿಂದ ಕೆಲಸ ಮಾಡುತ್ತಿದ್ದೇವೆ. ತಾವು ಹಣ ಬಿಡುಗಡೆ ಮಾಡುವಾಗ ಕೆಲವೊಂದು ಪ್ರಿನ್ಸಿಪಲ್ಸ್ ಇರುತ್ತದೆ. ಯಾವುದೇ ತಾಲ್ಲೂಕಿಗೆ ಅಥವಾ ಭಾಗಕ್ಕೆ ಹಣವನ್ನು ಬಿಡುಗಡೆ ಮಾಡುವಾಗ ಅಲ್ಲಿಯ ಪರಿಸ್ಥಿತಿ ಏನಿದೆ, ಅಲ್ಲಿಯ ಡ್ರಾಟ್ ಸೀರಿಯಸ್‌ನೆಸ್ ಏನಿದೆ, ಅಲ್ಲಿ ನಿರುದ್ಯೋಗಿ ಜನಗಳ ಸಂಖ್ಯೆ ಎಷ್ಟಿದೆ, ಅಲ್ಲಿ ಕೂಲಿಗಾರ ಜನರ ಸಂಖ್ಯೆ ಎಷ್ಟಿದೆ, ಅಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಗಂಭೀರ ಪರಿಸ್ಥಿತಿ ಹೇಗಿದೆ, ಇವುಗಳ ಬಗ್ಗೆಯೆಲ್ಲಾ ವಿಚಾರ ಮಾಡಬೇಕಾಗುತ್ತದೆ. ಇದರ ಬಗ್ಗೆ ಏನೂ ವಿಚಾರ ಮಾಡೇ ಇಲ್ಲ. 177

ತಾಲ್ಲೂಕುಗಳಿಗೂ ಅಡ್‌ಹಾಕ್ ಆಗಿ ಹಣ ಕೊಡುವುದು. ಕೆಲವು ತಾಲ್ಲೂಕು ಸಣ್ಣದಾಗಿವೆ, ಕೆಲವು ತಾಲ್ಲೂಕುಗಳು ದೊಡ್ಡದಿವೆ, ಕೆಲವು ತಾಲ್ಲೂಕುಗಳಲ್ಲಿ ಹೆಚ್ಚು ಸೀರಿಯಸ್‌ನೆಸ್ ಜಾಸ್ತಿ ಇದೆ, ಎಲ್ಲಾ ತಾಲ್ಲೂಕುಗಳಲ್ಲೂ ಸೀರಿಯಸ್‌ನೆಸ್ ಇರಬಹುದು, ಆದರೆ ಕೆಲವು ತಾಲ್ಲೂಕುಗಳಲ್ಲಿ ತೀವ್ರವಾದಂಥ ಸೀರಿಯಸ್ ಇರುತ್ತದೆ. ಆದರೆ ಇವುಗಳ ಬಗ್ಗೆ ವೈಜ್ಞಾನಿಕವಾಗಿ ಮಾನೀಟರಿಂಗ್ ಮಾಡಿ ಚಿಂತನೆ ಮಾಡಿ ಆಮೇಲೆ ಹಣವನ್ನು ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆ ಮಾಡುವ ಮುಂಚೆ ಎಲ್ಲಿ ಸೀರಿಯಸ್‌ನೆಸ್ ಹೆಚ್ಚಿದೆ ಎಂಬ ಬಗ್ಗೆ ನಿಮ್ಮ ಕಡೆ ಇನ್‌ಫರ್ಮೇಶನ್ ಇರುತ್ತದೆ. ಆ ಮಾಹಿತಿ ನಿಮ್ಮ ಕಡೆ ಇದ್ದರೆ ತಾವು ಈ ಪ್ರಕಾರ ಅಡ್‌ಹಾಕ್ ಆಗಿ ಎಲ್ಲ ಕಡೆಗೂ ಸಮನಾಗಿ ಹಣವನ್ನು ರಿಲೀಸ್ ಮಾಡುತ್ತಿರಲಿಲ್ಲ. ತಾವು ವಿಚಾರ ವಿನಿಮಯ ಮಾಡಿ ಎಲ್ಲಿ ಗಾಂಭೀರ್ಯತೆ ಹೆಚ್ಚಿದೆ, ಎಲ್ಲಿ ಕಷ್ಟು ಹೆಚ್ಚು ಇದೆ, ಎಲ್ಲಿ ಮೈಗ್ರೇಶನ್ ಹೆಚ್ಚಾಗುತ್ತಿದೆ ಎಂಬ ಬಗ್ಗೆ ನೋಡುತ್ತಿದ್ದಿರಿ. ಇವೊತ್ತಿನ ದಿವಸ ಬಡವರು ಆಂಧ್ರಕ್ಕೆ, ಗೋವಾಕ್ಕೆ, ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ಈ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ಇವೊತ್ತು ಫಾಡರ್ ಬಗ್ಗೆ ದುಡ್ಡನ್ನು ಇಲ್ಲಿಯವರೆವಿಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಇವೊತ್ತಿನವರೆಗೂ ಫಾಡರ್ ಬಗ್ಗೆ ಒಂದು ರೂಪಾಯಿ ಕೂಡ ಸರ್ಕಾರದಿಂದ ಬಿಡುಗಡೆಯಾಗಿಲ್ಲ. ಸರ್ಕಾರದಲ್ಲಿ ಅನುಭವದ ಕೊರತೆ ಇರಬಹುದು. ಆದರೆ ನಿಮ್ಮಂಥ ಅನುಭವಿ ಮಂತ್ರಿಗಳು ಇದ್ದಾರೆ. ಆದರೆ ಈ ರೀತಿ ಆಗಬಾರದು. ಆದರೆ ಹೀಗೇಕೆ ಆಗುತ್ತಿದೆ? ಹಣವಿದೆಯೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರು ನಿಮಗೆ ಹಣವನ್ನು ಕೊಟ್ಟಿದ್ದಾರೆ. ನಿಮ್ಮ ಲೆಕ್ಕಕ್ಕೆ ಜಮಾ ಮಾಡಿದ್ದಾರೆ. ಹೀಗಿದ್ದರೂ ಕೂಡ ಇವೊತ್ತು ಏಕೆ ಇನ್ನೂ ಹಣ ಬಿಡುಗಡೆಯಾಗುತ್ತಿಲ್ಲ? ಹಣ ಏಕೆ ಖರ್ಚಾಗುತ್ತಿಲ್ಲ? ಸರಿಯಾಗಿ ಹಣದ ಉಪಯೋಗ ಏಕೆ ಆಗುತ್ತಿಲ್ಲ? Scarcity works ತೆಗೆದುಕೊಂಡಿದ್ದೀರಿ. ಅದರ ಗುಣಮಟ್ಟ ನೋಡಿದಿರೇನು? ವಿಜಿಲೆನ್ಸ್ ಸೆಲ್ ಮಾಡಿದ್ದರ ಬಗ್ಗೆ, ಅದಕ್ಕೆ ಏನು ಮಾಡಿದ್ದೀರಿ. ಏನು ಹಣ ಪೋಲಾಗುತ್ತಿದೆಯೋ,ಎಲ್ಲೆಲ್ಲಿ ಎಂಪ್ಲಾಯ್‌ಮೆಂಟ್ ಜನರೇಟ್ ಆಗುತ್ತಿದೆ ಎಂಬ ಬಗ್ಗೆ ನಿಮ್ಮಲಿ ರೆಕಾರ್ಡ್ ಇದೆಯೇ? ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ, ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ ವಿಜಿಲೆನ್ಸ್ ಕಮಿಟಿಗಳು ಇತ್ತು. ಅವರು ಮಾನಿಟರಿಂಗ್ ಮಾಡುತ್ತಿದ್ದರು. ರಿಪೋರ್ಟ್ ಕೊಡುತ್ತಿದ್ದರು. ಎಷ್ಟು ಹೊಸದಾದವು, ಎಷ್ಟು ಕಂಪ್ಲೀಟ್ ಆದವು, ಕಳಪೆ ಕೆಲಸವಾಗಿದ್ದರೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳುವುದು, ಥರ್ಡ್ ಪಾರ್ಟಿಗೆ ಇನ್ಸ್‌ಪೆಕ್ಷನ್‌ನ್ನು ನಾವು ಮಾಡಿಸುತ್ತಿದ್ದೆವು. ಆದರೆ ಇವುಗಳ್ಯಾವವೂ

ಇವೊತ್ತು ಇಲ್ಲ. ಹೀಗಾಗಿ ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿರುವುದು ಬಹಳ ಗಂಭೀರವಾದ ವಿಷಯವಾಗಿದೆ. ಒಂದು ಕಡೆ ಕುಡಿಯುವ ನೀರಿಲ್ಲ, ಹೀಗಿದ್ದರೂ ನೀವು ಏನು ಮಾಡುತ್ತಿದ್ದೀರಿ? ಎಷ್ಟು ಕಡೆ ನೀವು ಬೋರ್‌ವೆಲ್ ಡ್ರಿಲ್ ಮಾಡಿದಿರಿ? ಎಷ್ಟು ಕಡೆ ನೀವು ಓಪನ್ ವೆಲ್ ಡ್ರಿಲ್ ಮಾಡಿದ್ದೀರಿ, ಇಂಥವುಗಳ ಬಗ್ಗೆಯೆಲ್ಲಾ ಮಾಹಿತಿ ಇಲ್ಲ, ಇವೊತ್ತು ವಿದ್ಯುಚ್ಛಕ್ತಿಯ ಕೊರತೆ. ಕಳೆದ ವರ್ಷ ತುಂಬಾ ಮಳೆಯಾಯಿತು. ಎಲ್ಲಾ ಡ್ಯಾಂಗಳು ಫುಲ್ ಆಗಿ ತುಂಬಿದವು. ಆದರೂ ಇಂದು scarcity of power ಇದೆ. ಏಕೆಂದರೆ 100 ಮಿಲಿಯನ್ ಯುನಿಟ್ಸ್‌ನಿಂದ 142 ಮಿಲಿಯನ್ ಯುನಿಟ್ಸ್‌ಗೆ ಕನ್ಸಂಪ್‌ಶನ್ ಹೋಗುತ್ತಿದೆಯೆಂದು ಪತ್ರಿಕೆಯಲ್ಲಿ ನಾನು ಓದಿದ್ದೇನೆ. ಹಾಗಾದರೆ ಇದರ ಬಗ್ಗೆ ನಿಮ್ಮ ನಿರ್ಣಯವೇನು? ಒಂದು ಕಡೆ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ, no, I don't want to head this committee ಎಂದು ಹೇಳುತ್ತಾರೆ. Energy Minister ಅವರನ್ನು ಕೇಳಿದರೆ ನನಗೇನೂ ಗೊತ್ತಿಲ್ಲ ಎಂದು ಹೇಳುತ್ತಾರೆ, ಮುಖ್ಯಮಂತ್ರಿಗಳು ಹೇಳುತ್ತಾರೆ, ನಾನು ಸಮಸ್ಯೆ ಬಗೆಹರಿಸುತ್ತೇನೆಂದು, ಏನು ಉತ್ತರವೇ ಅದು, ಲೋಡ್ ಶೆಡ್ಡಿಂಗ್, ರೈತರಿಗೆ ಕಷ್ಟವಾಗುತ್ತದೆ, ಎಲ್ಲೆಲ್ಲಿ ಸ್ವಲ್ಪ ನೀರಿದೆ, ಎಲ್ಲೆಲ್ಲಿ ಪಂಪ್‌ಸೆಟ್ ರಿಪೇರಿ ಮಾಡಬೇಕಾಗಿದೆಯೋ ಆ ಕೆಲಸ ಅಲ್ಲಿ ಆಗುತ್ತಿಲ್ಲ. ವಿದ್ಯಾರ್ಥಿಗಳಿಗೆ ಈಗ ಪರೀಕ್ಷೆಗಳು ಶುರುವಾಗುತ್ತದೆ, ಈಗ ಪರೀಕ್ಷೆಗಳ ಕಾಲ, ಹಳ್ಳಿಯಲ್ಲಿ ಲೈಟ್ಸ್ ಇಲ್ಲ, ವಿದ್ಯುಚ್ಛಕ್ತಿ ಕೊರತೆ, ಖರೀದಿ ಮಾಡಿ, ಹೇಗಿದ್ದರೂ ಹಣದ ಕೊರತೆಯೇನೂ ಇಲ್ಲವೆಂದು ನೀವೇ ಹೇಳಿದ್ದೀರಲ್ಲ. ಮೊನ್ನೆ ಉಪ ಮುಖ್ಯಮಂತ್ರಿಗಳು ಹೇಳಿದರು, ಆರ್.ಬಿ.ಐ.ನವರು ನಮ್ಮನ್ನು praise ಮಾಡಿದ್ದಾರೆ, I am No.1 in the country. ಇರಬಹುದು, ನನಗೆ ಗೊತ್ತಿಲ್ಲ, ನೋಡಿ ಅದರ ಬಗ್ಗೆ ಹೇಳೋಣ. ಆದರೆ ಅದಕ್ಕೆ Fiscal Responsibility Act, ಸಿದ್ದರಾಮಯ್ಯನವರು ಇದ್ದಾಗ. ಎಸ್.ಎಂ. ಕೃಷ್ಣರವರು ಇದ್ದಾಗ ಈ ಬಗ್ಗೆ ಹಲವಾರು ಕ್ರಮಗಳನ್ನು ನಾವೇನು ತೆಗೆದುಕೊಂಡೆವು, ವ್ಯಾಟ್ ಜಾರಿಗೆ ಬಂತು. ಇದರಿಂದಾಗಿ ಇಡೀ ದೇಶದಲ್ಲಿಯೇ ಈ ವಿಚಾರದಲ್ಲಿ ಸುಧಾರಣೆಯಾಗಿದೆ. ಆರ್.ಬಿ.ಐ.ನವರೇ 9% ಜಿ.ಡಿ.ಪಿ. ಗ್ರೋಥ್ ಆಗುತ್ತದೆ ಎಂದು ಹೇಳಿದ್ದಾರೆ. ಅದರ ಲಾಭ ಕರ್ನಾಟಕದಲ್ಲೂ ಆಗುತ್ತಿದೆ. ಅದರಲ್ಲಿ ನಿಮ್ಮ ಎಫರ್ಟ್ಸ್ ಇರಬಹುದು, ಇಲ್ಲವೆಂದು ನಾನು deny ಮಾಡುತ್ತಿಲ್ಲ. ಏಕೆಂದರೆ ಅದಕ್ಕೆಲ್ಲಾ ರೆಕಾರ್ಡ್ಸ್ ಇದೆ. ಆದರೆ....

ಶ್ರೀ ಎಂ.ಪಿ. ಪ್ರಕಾಶ್(ಗೃಹ ಸಚಿವರು): ಕರ್ನಾಟಕದಲ್ಲಿ ಜಿ.ಡಿ.ಪಿ. 12.1%.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, Karnataka was always ahead. Karnataka has been always ahead in the country. Let us discuss it afterwards. I am not going to argue on that. ನಾನು ಏನು ಹೇಳುತ್ತಿದ್ದೇನೆಂದರೆ ನಿಮ್ಮ ಹತ್ತಿರ ಹಣವಿದೆಯೆಂದು ಹೇಳುತ್ತಿದ್ದೀರಲ್ಲ, ಆ ಹಣವನ್ನು ಉಪಯೋಗ ಮಾಡಿಕೊಂಡು ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುವುದಕ್ಕೆ ನಿಮಗೇನು ಪ್ರಾಬ್ಲಂ ಇದೆ? Why you are hesitant? ನಿಮಗೆ ಪ್ರಾಬ್ಲಂ ಏನು? ಒಂದು ವೇಳೆ ಟ್ರೆಶರಿಯಲ್ಲಿ ಹಣವಿಲ್ಲವೆಂದರೆ ಅದು ಬೇರೆ ಪ್ರಶ್ನೆ. ಆದರೆ ನೀವೇ ಹೇಳುತ್ತೀರಿ, ಸಾಕಷ್ಟು ನಮ್ಮ ಬಳಿ ಹಣವಿದೆಯೆಂದು ಹೇಳುತ್ತೀರಿ. ಹೀಗಿರುವಾಗ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಿ, save the situation. ಇವೊತ್ತು ಬೆಳೆಗಳೆಲ್ಲಾ ಹಾಳಾಗಿವೆ. ನಮ್ಮ ಜಿಲ್ಲೆಯಲ್ಲಿ ಹತ್ತಿ ಬೆಳೆಯೆಲ್ಲಾ ಹಾಳಾಗಿದೆ. ಕೆಲವು ಕಡೆ ಅಲ್ಪ ಪರಿಹಾರ ಕೊಟ್ಟಿರಿ. ಯಾವ ಪರಿಹಾರ ಅದು, ಕೆಲವು ಕಡೆ ಏನಾಗಿದೆ ಫಾರೆಸ್ಟ್ ಲ್ಯಾಂಡ್‌ಗೆ ಕೊಟ್ಟಿಲ್ಲ. ಅಲ್ಲಿ ಫಾರೆಸ್ಟ್ ಲ್ಯಾಂಡ್ ಅವರಿಗೆ ಮಂಜೂರಾಗಿದೆ. ಆದರೆ ನಿಮ್ಮ ಮೇಲೆ ನಾನು ದೂರು ಮಾಡುತ್ತಿಲ್ಲ. ಕಳೆದ ಮೂರ್‍ನಾಲ್ಕು ವರ್ಷದಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಆರ್ಡರ್ ಮಾಡಿದರೂ ಸಹ ಇವೊತ್ತು ಅರಣ್ಯ ಇಲಾಖೆಯಿಂದ deforest ಮಾಡಿಲ್ಲ. ಕೇಂದ್ರ ಸರ್ಕಾರದವರು ಲ್ಯಾಂಡ್ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಇನ್ನೂ deforest ಆಗಿಲ್ಲ. ಇನ್ನೂ ಫಾರೆಸ್ಟ್‌ನ ಹೆಸರಿನಲ್ಲಿಯೇ ಇದೆ. ಅವರಿಗೆ ಪರಿಹಾರವನ್ನೂ ಕೂಡ ಇನ್ನೂ ಕೊಟ್ಟಿಲ್ಲ. ಕೇವಲ meager compensation ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ಹೇಳಿ. ಹೀಗಾಗಿ ಇಂಥ ಎಲ್ಲ ಪರಿಸ್ಥಿತಿಗಳು ಇವೆ. ಒಂದು ಕಡೆ ರೈತರಿಗೆ ಪರಿಹಾರ ಕೊಟ್ಟಿಲ್ಲ, ಒಂದು ಕಡೆ ಕುಡಿಯುವುದಕ್ಕೆ ನೀರಿಲ್ಲ, ಮತ್ತೊಂದು ಕಡೆ ವಿದ್ಯುಚ್ಛಕ್ತಿ ಇಲ್ಲ, ಒಂದು ದನಕರುಗಳಿಗೆ ಮೇವಿಲ್ಲ, ಇವುಗಳಿಗೂ ಕೂಡ ಕುಡಿಯುವುದಕ್ಕೆ ನೀರಿಲ್ಲದಂಥ ಪರಿಸ್ಥಿತಿ ಇದೆ. ನಾನೂ ಇನ್ನೂ ಆರ್ಡರ್ ನೋಡಿಲ್ಲ, ಮೊನ್ನೆ 177 ತಾಲ್ಲೂಕುಗಳಿಗೂ ಹಣವನ್ನು ಬಿಡುಗಡೆ ಮಾಡಿದ್ದಾರಂತೆ. ಎಲ್ಲಿ ಅತಿವೃಷ್ಟಿಯಾಗಿರುವಂಥ ಪರಿಸ್ಥಿತಿ ಇದೆ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಕೊಡಗು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ,ಬೆಳಗಾಂ ಜಿಲ್ಲೆಯ ಕೆಲವು ಭಾಗ, ಬಾಗಲಕೋಟೆ,

ಬಿಜಾಪುರ ಜಿಲ್ಲೆಯ ಕೆಲವು ಭಾಗ, ರಾಯಚೂರು ಜಿಲ್ಲೆಯ ಕೆಲವು ಭಾಗಗಳಿಗೆ ಈವರೆವಿಗೂ ಹಣವನ್ನೇ ಬಿಡುಗಡೆ ಮಾಡಿಲ್ಲ. ನಿನ್ನೆ ಮೊನ್ನೆ ಆರ್ಡರ್ ಆಗಿದೆ. ನಾನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ವಿಷಯ ತಂದಿದ್ದೆ, ತಾವು ಧಾರವಾಡದಲ್ಲಿ ಭೇಟಿಯಾದಾಗ ಹೇಳಿದ್ದೆ, ತಾವು ಎಲ್ಲಾ ಜಿಲ್ಲೆಗೆ flood affected districts ಗೆ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಹಣವನ್ನು ಕೊಟ್ಟಿಲ್ಲ. ಏಕೆ? ಏಕೆ ಈ ಮಲತಾಯಿ ಧೋರಣೆ? ನೀವು ಮೊನ್ನೆ ದಾಂಡೇಲಿಗೆ ಬಂದಿದ್ದಿರಿ, ಒಳ್ಳೆಯ ಮಾತು ಹೇಳಿದಿರಿ, ಏನ್ರಿ ದೇಶಪಾಂಡೆಯವರೆ ನೀವು ಎಂ.ಎಲ್.ಎ. ಆಗಿದ್ದೀರಿ, ಇಲ್ಲಿ ಎಂಥ ರಸ್ತೆ ಹಾಳಾಗಿದೆ ಎಂದು ಹೇಳಿದಿರಿ. ನಿಜ ಸಾರ್, ನಾನು ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ, ಸಾರ್ ನನ್ನ ಕಣ್ಣಲ್ಲಿ ನೀರು ಬರುತ್ತದೆ, 25 ವರ್ಷದಿಂದ ಎಂ.ಎಲ್.ಎ. ಆಗಿದ್ದೇನೆ. ಇಂಥ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ. ಮಾನ್ಯ ರೇವಣ್ಣನವರಿಗೆ ನಾಲ್ಕು ಪತ್ರಗಳನ್ನು ಬರೆದಿದ್ದೇನೆ. ಇಲ್ಲಿ ರಸ್ತೆಯ ಕಂಡೀಶನ್ ತೀರ ಹದಗೆಟ್ಟಿದೆ, ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲ. ಏನಾದರೂ ಮಾಡಿ ಸರಿ ಮಾಡಿ ಎಂದು ಪತ್ರವನ್ನು ಬರೆದಿದ್ದೇನೆ. ಅಲ್ಲಿ ರಸ್ತೆ ಹಾಳಾಗಿವೆ, ಮೈನಿಂಗ್ ಟ್ರಾಫಿಕ್, ಹೆಚ್ಚು ಮಳೆಯಿಂದಲೂ ಹಾಳಾಗಿವೆ, ರಸ್ತೆ ಸರಿಪಡಿಸಲು ಹಣ ಬಿಡುಗಡೆಯನ್ನು ನೀವು ಮಾಡಬೇಕಲ್ಲವೆ, ನಾನೇನೂ ಈಗ ಮಂತ್ರಿಯಲ್ಲ, ಹಣ ಬಿಡುಗಡೆ ಮಾಡುವ ಅಧಿಕಾರ ನನಗಿಲ್ಲ. ಆಗ ನಮ್ಮ ಮೇಲೆ ನೀವು ಟೀಕೆ ಮಾಡಿ ಹೋದಿರಿ. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಬಹಳ ಚೆನ್ನಾಗಿ ರೋಡ್‌ಗಳಿತ್ತು. It is one of the best districts as far as the roads are concerned. ಆದರೆ ಕಳೆದ ಒಂದು, ಒಂದೂವರೆ ವರ್ಷದಲ್ಲಿ ನಮ್ಮ ಜಿಲ್ಲೆ ಒಂದೇ ಅಲ್ಲ. ಬೇರೆ ಎಲ್ಲ ಜಿಲ್ಲೆಗಳಲ್ಲೂ ರಸ್ತೆಗಳು ಹಾಳಾಗಿವೆ. ನಾವು ಮೊನ್ನೆ ದೊಡ್ಡಬಳ್ಳಾಪುರಕ್ಕೆ ಹೋಗಿದ್ದೆವು. ಅಲ್ಲಿ ರಸ್ತೆಯ ಕಂಡೀಶನ್ ಹೇಗಿದೆ ನೋಡಿದ್ದೀರಾ. ಹೀಗಾಗಿ ನೀವು ನಮ್ಮ ಮೇಲೆ ಟೀಕೆ ಮಾಡಿ. ಟೀಕೆ ಮಾಡುವಾಗ .. . .

ಶ್ರೀ ಎನ್. ಚೆಲುವರಾಯಸ್ವಾಮಿ:– ಹಾಗಾದರೆ ನೀವು ನಾವೇನೂ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದೀರ?

ಶ್ರೀ ಆರ್.ವಿ. ದೇಶಪಾಂಡೆ;– ಒಂದು ನಿಮಿಷ, ನಾವು ಟೀಕೆ ಮಾಡುವಾಗ ನಮ್ಮ ಸ್ನೇಹಿತರಾದ ಮಾನ್ಯ ಶೆಟ್ಟರ್ ಸಾಹೇಬರೆ ನೀವು ಒಂದು ತಿಳಿದುಕೊಳ್ಳಬೇಕು. ಈಗ ನೀವು ಅಧಿಕಾರದಲ್ಲಿ ಇದ್ದೀರಿ. ರಸ್ತೆ ರಿಪೇರಿ ಮಾಡುವ ಕೆಲಸ ನಿಮ್ಮದು, ನನ್ನದಲ್ಲ. ನಾನು ಶಾಸಕನಾಗಿ ಇರಬಹುದು, ನಾನು ಏನು

ಮಾಡಬಹುದು, ಇಲ್ಲಿ ಕೂಗಬಹುದು, ನಿಮಗೆ ಪತ್ರ ಬರೆಯಬಹುದು, ಅಷ್ಟೆ ಮಾಡಬಹುದು, ಮತ್ತೇನೂ ಮಾಡುವುದಕ್ಕಾಗುತ್ತದೆ. ಈಗ heavy rains ನಿಂದಾಗಿ ಇಡೀ ರಾಜ್ಯದಲ್ಲಿ ರಸ್ತೆಯ ಪರಿಸ್ಥಿತಿ ಹಾಳಾಗಿದೆ. ಹಣ ಬಿಡುಗಡೆ ಮಾಡಿ. You take up road repairs. Property damage ಆಗಿದೆ, ಅದಕ್ಕೆಲ್ಲಾ ಹಣವನ್ನು ಬಿಡುಗಡೆ ಮಾಡಿ. ಆ ರೀತಿ ಏಕೆ ನೀವು ಮಾಡುತ್ತಿಲ್ಲ? ಹಾಗಾಗಿ ಎಲ್ಲಾ ಹಂತದಲ್ಲಿ ಇವತ್ತು ಸರ್ಕಾರ ಬರಗಾಲ ಮತ್ತು ಅತಿವೃಷ್ಟಿಯನ್ನು tackle ಮಾಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಪ್ರಕಾಶ್ ಅವರ ಸ್ಟೇಟ್‌ಮೆಂಟ್ ಅನ್ನು ನಾನು ಓದಿಲ್ಲ. ಮಾನ್ಯ ಕಂದಾಯ ಸಚಿವರ ಸ್ಟೇಟ್‌ಮೆಂಟ್ ನಾನು ಓದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ರೈತರು ಬಹಳ ಕಷ್ಟದಲ್ಲಿದ್ದಾರೆ, ನಮ್ಮ ನಾಯಕರು ಹೇಳಿದ ಹಾಗೆ 122 ರೈತರ suicide ಆಗಿವೆ, ರೈತರ ಸಹಾಯಕ್ಕೆ ನಾವು ಧಾವಿಸಬೇಕು ಎಂದು ಹೇಳಿದರು, ಸಂತೋಷ. ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ, ಸಂತೋಷ. ಆದರೆ ಮೊದಲನೆ ಸ್ಟೇಟ್‌ಮೆಂಟ್ ಏನು ಹೇಳಿದಿರಿ? ಎಲ್ಲಾ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ. 2ನೆ ಸ್ಟೇಟ್‌ಮೆಂಟ್ co-operativeಗೆ ಸಂಬಂಧಪಟ್ಟಂಥ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ. ಮೂರನೆಯದಾಗಿ ಕ್ರಾಪ್ ಲೋನ್ ಮನ್ನಾ ಮಾಡುತ್ತೇವೆಂದು ಹೇಳಿದಿರಿ. 4ನೇ ಸ್ಟೇಟ್‌ಮೆಂಟ್ ಏನು? 5 ಸಾವಿರ ಮಾಡಬೇಕೋ 10 ಸಾವಿರ ಮಾಡಬೇಕೋ ಎಂದು examine ಮಾಡುತ್ತಿದ್ದೇವೆಂದು ಹೇಳಿದಿರಿ. ನಿಮ್ಮ ಸರ್ಕಾರದಲ್ಲಿ clarity ಇಲ್ಲವೇ? ನಿಮ್ಮಗಳಲ್ಲಿ ಹೊಂದಾಣಿಕೆ ಇಲ್ಲವೇ? ರಾಜ್ಯದ ಒಬ್ಬ ಮುಖ್ಯಮಂತ್ರಿ ರಾಜ್ಯದಲ್ಲಿನ ರೈತರ ಸಾಲವನ್ನು ಮನ್ನಾ ಮಾಡುತ್ತೇನೆಂದು ಹೇಳಿದಾಗ ನಾವು ಅದನ್ನು ಸ್ವಾಗತ ಮಾಡಿದ್ದೇವೆ, ಮಾಡಿ. ಒಟ್ಟು 90 ಲಕ್ಷ ರೈತ ಕುಟುಂಬಗಳು ಇವೆ. ಅದರಲ್ಲಿ ಕೋ-ಅಪರೇಟೀವ್‌ನಲ್ಲಿ ಕವರ್ ಆಗುವ families ಎಷ್ಟು? 17 ಲಕ್ಷ ಚಿಲ್ಲರೆ ಮೆಜಾರಿಟಿ Nationalized Bank ನಿಂದ ಲೋನ್ ತೆಗೆದುಕೊಂಡಿರುವುದು. ಅವರ ಸಾಲ ಯಾರು ಮನ್ನಾ ಮಾಡುವುದು? ಕೇಂದ್ರದವರು ಘೋಷಣೆ ಮಾಡಲಿಲ್ಲವಲ್ಲ, ಕೇಂದ್ರದವರು ಮಾಡಿದರೆ ಇಡೀ ದೇಶದಲ್ಲಿ ಮಾಡಬೇಕಾಗುತ್ತದೆ. ನೀವು ಘೋಷಣೆ ಮಾಡಿದಿರಿ. ಕೇಂದ್ರ ಸರ್ಕಾರ ರೈತರಿಗೆ ಸುಲಭವಾಗಿ ಸಾಲ ಸಿಗಲೆಂದು ಬಡ್ಡಿ ದರ ಕಡಿಮೆ ಮಾಡಿದ್ದಾರೆ. ಹಾಗಾಗಿ ನಿಮಗೆ ನಾಲ್ಕು ಪರ್ಸೆಂಟ್‌ನಲ್ಲಿ ಬಡ್ಡಿ ಕೊಡುವುದಕ್ಕೆ ಸಾಧ್ಯವಾಯಿತು. ಆದುದರಿಂದ ನೀವು ಸಾಲ ಮನ್ನಾ ಮಾಡಿ. Nationalized Bankದು, RRBದು ಮಾಡಿ, co-operativesದು ಮಾಡಿ.

ಎಲ್ಲಾ ಮಾಡಬೇಕು. 5 ಸಾವಿರ ಅಥವಾ 10 ಸಾವಿರದಿಂದ ಏನೂ ಆಗುವುದಿಲ್ಲ. ಅದು ಮೋಸ ಆಗಬಹುದು. ಆದುದರಿಂದ ನಿಮಗೆ ಎಲ್ಲಾ ಸಾಲ ಮನ್ನಾ ಮಾಡಿ ಎಂದು ಸಲಹೆ ಮಾಡುತ್ತಿದ್ದೇನೆ. ನೇಕಾರರು ಕಷ್ಟದಲ್ಲಿದ್ದಾರೆ, ಅವರಿಗೂ 4 ಪರ್ಸೆಂಟ್ ನಲ್ಲಿ ಕೊಟ್ಟಿದ್ದಾರೆ, ಅವರದು ಸಾಲ ಮನ್ನಾ ಮಾಡಿ. ಮೀನುಗಾರರು ಕಷ್ಟದಲ್ಲಿದ್ದಾರೆ, ಅವರಿಗೂ 4 ಪರ್ಸೆಂಟ್ ಮಾಡಿ. Unemployed youth ಅವರು ದಂಧೆ ಮಾಡುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ, ಅದು ಹಾನಿಯಾಗಿದೆ, ಅವರದು ಮನ್ನಾ ಮಾಡಿ. ಕೂಲಿಗಾರರು ಸಾಲ ತೆಗೆದುಕೊಂಡಿದ್ದಾರೆ, ಅವರದು ಸಾಲ ಮನ್ನಾ ಮಾಡಿ. ಏಕೆ ಮಾಡುವುದಿಲ್ಲ? ಸಂತೋಷ, ಅದೆಲ್ಲ ಮಾಡಿ. ನಾವು ನಿಮಗೆ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಬಂದು ಹಾರ ಹಾಕುತ್ತೇವೆ, ಅಭಿನಂದಿಸುತ್ತೇವೆ. ಮಾನ್ಯ ಧರ್ಮ್‌ಸಿಂಗ್ ಕಾಲದಲ್ಲಿ ರೈತರಿಗೆ ಇತ್ತು. After I became Co-operative minister fishermen ಮತ್ತು weaversಗೆ ನಾವು ಬಡ್ಡಿದರ 6 ಪರ್ಸೆಂಟ್ ಮಾಡಿದೆವು. ನೀವು ಅದನ್ನು 4 ಪರ್ಸೆಂಟ್ ಮಾಡಿದಿರಿ. ಅದನ್ನು ನಾನು dispute ಮಾಡುತ್ತಿಲ್ಲ. ಅವರದು ಕೂಡ ಸಾಲ ಮನ್ನಾ ಮಾಡಿ ಎಂದು ಹೇಳುತ್ತಿದ್ದೇನೆ. ರೈತರಿಗೂ ಮಾಡಿ, ನೇಕಾರರಿಗೂ ಮಾಡಿ, ಮೀನುಗಾರರಿಗೂ ಮಾಡಿ, ಕೂಲಿಗಾರರಿಗೂ ಮಾಡಿ. ಅದಕ್ಕೆ ಬಹಳಷ್ಟು ಹಣ ಏನು ಬೇಡ, ನಿಮ್ಮ ಹತ್ತಿರ ಸಾಕಷ್ಟು ಹಣ ಇದೆ. ಅದಕ್ಕೆ 17 ರಿಂದ 18 ಸಾವಿರ ಕೋಟಿ ರೂಪಾಯಿ ಇದ್ದರೆ ಸಾಕು. ನಿಮ್ಮ treasury ಯಲ್ಲಿ ಹಣ ಇದೆ. ಎ.ಟಿ. ರಾಮಸ್ವಾಮಿ ಕಮಿಟಿಯಿಂದ ಹಣ ವಸೂಲಿ ಮಾಡುತ್ತೇವೆಂದು ಹೇಳಿದ್ದೀರಿ. ಮಾಡಿ, ಯಾರು ಅಡ್ಡ ಬರುತ್ತಿದ್ದಾರೆ ? ಜಮೀನನ್ನು ಯಾರು ಅತಿಕ್ರಮಣ ಮಾಡಿದ್ದಾರೆ ಅದನ್ನು ಹರಾಜು ಹಾಕಿ. ಆದರೆ ತಾವೇನು ಮಾತನಾಡುತ್ತೀರಿ, ಆ ಪ್ರಕಾರ ನಡೆದುಕೊಳ್ಳಿ. ಮಾತಾನಾಡುವುದು ಒಂದು, ಮಾಡುವುದೊಂದು, ಹೇಳುವುದೊಂದು, ಹೀಗಾಗಿ ಮಾನ್ಯ ಅಧ್ಯಕ್ಷರೆ, ಈ ಬರಗಾಲದಲ್ಲಿ ಅತಿವೃಷ್ಟಿಯಲ್ಲಿ ರೈತರು ಕಂಗಾಲಾಗಿದ್ದಾರೆ. ಸಾಮಾನ್ಯ ಜನ ಕಂಗಾಲಾಗಿದ್ದಾರೆ. ಇವತ್ತು ಸಾಮಾನ್ಯ ಜನ ಕಷ್ಟದಲ್ಲಿದ್ದಾರೆ. ವಿದ್ಯುಚ್ಛಕ್ತಿ ಸರಿಯಿಲ್ಲ, ರಸ್ತೆಗಳು ಸರಿಯಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಮೇವಿಲ್ಲ, ಜನರಿಗೆ ಉದ್ಯೋಗವಕಾಶವಿಲ್ಲ. ಹಾಗಾಗಿ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟರೆ ಮಾತ್ರ ಇವೆಲ್ಲಾ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ತಾವು ನಿಲುವಳಿ ಸೂಚನೆಗೆ allow

ಮಾಡಬೇಕು. ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತಾಳುತ್ತಿದೆ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರ ಏನು ಮಲತಾಯಿ ಧೋರಣೆ ತೋರಿಸುತ್ತಿದೆ ಎನ್ನುವುದನ್ನು ಸಾಬೀತುಪಡಿಸಬೇಕು. ಕೇಂದ್ರ ಸರ್ಕಾರ in timeನಲ್ಲಿ ಹಣವನ್ನು release ಮಾಡಿದೆ. ಅದನ್ನು ನಿಮಗೆ ಖರ್ಚು ಮಾಡುವುದಕ್ಕೆ ಆಗಿಲ್ಲ. Release ಮಾಡಿ ನೀವು, release ಮಾಡಿದರೆ ತಾನೆ ಖರ್ಚಾಗುವುದು. ಹಾಗಾಗಿ ನಾನು ಒತ್ತಾಯಿಸುತ್ತೇನೆ, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಮೂರನೆಯವರು ಯಾರಾದರೂ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಮನವರಿಕೆ ಆಗಿರಬೇಕು ಕೇಳಿ, ಮನವರಿಕೆ ಆಗಿರಬೇಕಲ್ಲ, now you are convinced.

ಶ್ರೀ ವಾಟಾಳ್ ನಾಗರಾಜ್: ಇದನ್ನು ಯಾವ ರೀತಿ ಮಾಡಬೇಕೆಂದು ಹೇಳಿ ತಮಗೆ ಇನ್ನು ಮನವರಿಕೆಯಾಗಲಿಲ್ಲ. ಈಗ ಹೇಳಿದರು ನನಗೆ convince ಮಾಡಿ ಎಂದು, ಈಗ ಇಬ್ಬರ ಭಾಷಣವಾಯಿತು. ಇನ್ನು ನಿಮಗೆ ಮನವರಿಕೆಯಾಗಲಿಲ್ಲ. ಈಗ ಇವರು ಮಾತನಾಡಿದ ಮೇಲೆ ತಮಗೆ ಮನವರಿಕೆಯಾಗಬಹುದು ಎಂದು ಕಾಣುತ್ತದೆ. ಅವರು ದಾರಿ ತಪ್ಪಿಸುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸಹೋದ್ಯೋಗಿ ದೇಶಪಾಂಡೆಯವರು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಳ್ಳಬೇಕೆ ಎನ್ನುವುದಕ್ಕೆ ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸುವುದಕ್ಕೆ ಮಾತ್ರ ನಾವು ನಿಂತಿದ್ದೇವೆ. ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಕೆಲವು ಸೀಮಿತ ವಿಷಯಗಳಿಗೆ ಮಾತ್ರ ಸೆಳೆಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಸರ್ಕಾರ ಎಂದರೆ ಈ ರಾಜ್ಯದ ಜನರ ಪರಿಪಾಲನೆ ಮಾಡತಕ್ಕಂಥ ಹೊಣೆ. ಋತುಮಾನಗಳು ಹೇಗೆ ಪ್ರತಿವರ್ಷ ತಮ್ಮ ಪ್ರಕ್ರಿಯೆಯನ್ನು ನಡೆಸಿಕೊಂಡು ಹೋಗುತ್ತವೆ ಎನ್ನುವುದರ ಬಗ್ಗೆ ಬಹಳ ಸೂಕ್ಷ್ಮವಾದಂತಹ ನಿಗಾ ಇಡಬೇಕಾದಂತಹ ಜವಾಬ್ದಾರಿ ಸರ್ಕಾರಕ್ಕೆ ಇದೆ. ಸರ್ಕಾರದಲ್ಲಿ Meteorological Department ಇದೆ. ಪ್ರತಿವರ್ಷ ಹೇಗೆ ಮಳೆ ಬರಬಹುದು? ಯಾವ್ಯಾವ ತಿಂಗಳಿಗೆ ಮಳೆ ಎಷ್ಟು ಬರಬಹುದು? ಎಲ್ಲಾ ಜಲಾನಯನ ಪ್ರದೇಶದಲ್ಲಿ ಇರುವಂತಹ ಜಲಾಶಯಗಳಿಗೆ ಎಷ್ಟು ನೀರು

4. 00 P.M

ಬರಬಹುದು ಎನ್ನುವ ನಿರೀಕ್ಷೆ ಇರುತ್ತದೆ. ನಂತರ ಬರತಕ್ಕಂಥ ಮಳೆಗಳಿಗೆ rain shadow areas ನಮ್ಮಲ್ಲಿ ವಿಶೇಷವಾಗಿ ಏನಿದೆ, ಇಲ್ಲಿ ಮಳೆ ಹೇಗೆ ಬರುತ್ತದೆ ಎನ್ನುವುದರ ಬಗ್ಗೆ ವಾಚ್ ಇರಬೇಕಾಗುತ್ತದೆ. ಪ್ರವಾಹ ಎಂದರೆ ದಿಢೀರ್ ಆಗಿ ಬಂದುಬಿಡುತ್ತದೆ. ಆದರೆ ಬರಗಾಲ ದಿಢೀರ್ ಎಂದು ಬರುವುದಿಲ್ಲ. ಅದು ಸಾಕಷ್ಟು ಸೂಚನೆ ಕೊಟ್ಟು ಬರುತ್ತದೆ. ನಾನು ಈ ಸರ್ಕಾರ ಎಂದು ಹೇಳುವುದಿಲ್ಲ. ಯಾವುದೇ ಮಾನವೀಯ ಸರ್ಕಾರಕ್ಕೆ ತನ್ನ ಅರಿವು, ಜವಾಬ್ದಾರಿಯ ಬಗ್ಗೆ ಪ್ರಜ್ಞೆ ಇದ್ದರೆ ಪರಿಸ್ಥಿತಿಗಳನ್ನು ಗಮನಿಸಿಕೊಂಡು ಬರಬಹುದಾದಂತಹ ಸಂದರ್ಭಗಳನ್ನು ನಿಭಾಯಿಸುವುದಕ್ಕೆ ಎಲ್ಲಾ ರೀತಿಯಿಂದ ಅವರು ಸಜ್ಜಾಗಬೇಕಾಗುತ್ತದೆ. ಯಾವಾಗ ಇದರ ಬಗ್ಗೆ ನಿಗಾ ಇಡುವುದಿಲ್ಲ, ಮಾಹಿತಿ ಇರುವುದಿಲ್ಲ, ಅದರ ಬಗ್ಗೆ ಆಲೋಚನೆ ಇರುವುದಿಲ್ಲ, ಅದೂ ಕೂಡ ರಾತ್ರೋರಾತ್ರಿ ಬರಗಾಲ ಬಂದಿದೆ ಎಂದು ಬರಗಾಲ ಪರಿಹಾರಕ್ಕೆ ದಿಢೀರ್ ಎಂದು ಸರ್ಕ್ಯುಲರ್ ಕಳುಹಿಸುವುದು, ಉತ್ತರ ಕಳುಹಿಸುವುದು, ಹಾವಭಾವಗಳಿಂದ ಓಡಾಡುವುದು ಇದೆಲ್ಲಾ ಮಾಡುತ್ತಾರೆ. ನಿಮಗೆ ಯಾವ ತಿಂಗಳಲ್ಲಿ ಈ ಸಲ ಮಳೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಅಂದಾಜು ಗೊತ್ತಾಗಬಹುದು? ಬಿತ್ತನೆಯಾಗಿಲ್ಲ, ಕೃಷಿಯನ್ನೆ ನಂಬಿಕೊಂಡು ಜೀವನ ಮಾಡತಕ್ಕಂಥ ಕೃಷಿಕ ಒಂದು ಕಡೆ, ಕೃಷಿಕ ತನಗೆ ಕೊಡಬಹುದಾದಂತ ಉದ್ಯೋಗ ಅದನ್ನೆ ನಂಬಿಕೊಂಡು ಜೀವನ ಮಾಡತಕ್ಕಂಥ ಕೃಷಿ ಕಾರ್ಮಿಕರು. ಕೃಷಿ ಕಾರ್ಮಿಕರು ಗಂಟುಮೂಟೆ ಕಟ್ಟಿಕೊಂಡು ವಲಸೆ ಹೋಗುತ್ತಾನೆ. ನಮ್ಮ ಕಡೆ ಅವನಿಗೆ ತಿರುಪತಿ ಹತ್ತಿರ ಆಗುತ್ತದೆಂದು ಅಲ್ಲಿಗೆ ಹೊರಟು ಹೋಗುತ್ತಾನೆ. ಎರಡು ಕೆಲಸ ಒಟ್ಟಿಗೆ ಆಗುತ್ತದೆ. ಈ ಕಡೆ ಜನ ಬೇರೆ ಬೇರೆ ಭಾಗಕ್ಕೆ ಹೋಗುತ್ತಾರೆ. Boarder areaದಲ್ಲಿ ಇರುವವರು ಗೋವಾ ಅಥವಾ ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಕೃಷಿಕ ಎಲ್ಲಿ ಹೋಗಬೇಕು? ಅವನು ಜಮೀನು ಹೊತ್ತುಕೊಂಡು ಹೋಗುವ ಹಾಗೆ ಇಲ್ಲ. ದನಕರುಗಳನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುವ ಹಾಗೆ ಇಲ್ಲ. ಊರಲ್ಲಿ ಮಾಡುವುದಕ್ಕೆ ಉದ್ಯೋಗ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ. ಅವನಿಗೆ ದಾಸ್ತಾನು ಮನೆಯಲ್ಲಿ ಏನಿತ್ತು ಅದು closeಆಗಿದೆ. ಸಂಪಾದನೆ ಮಾಡುವುದಕ್ಕೆ ಮಾರ್ಗ ಇಲ್ಲ. ಸಂಸಾರದ ನಿರ್ವಹಣೆ ನಡೆಸಬೇಕು. ಸರ್ಕಾರ ಹೇಗೆ ಈ ಸಂಕಷ್ಟದಲ್ಲಿ ಅವನ ಜೊತೆ ಪಾಲ್ಗೊಳುತ್ತದೆ ಎನ್ನುವ ಸಂಗತಿ. ಪ್ರಾಮಾಣಿಕತೆಯಿಂದ ಈ ಒಂದು

ವಿಚಾರವನ್ನು ಪ್ರಾರಂಭದಲ್ಲೇ ಅಭ್ಯಾಸ ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೆ, ಈ ಶಾಪವನ್ನು ಕೂಡ ವರವಾಗಿ ಪರಿವರ್ತನೆ ಮಾಡಿಕೊಳ್ಳಬಹುದು. ಹಲವು ರಾಜ್ಯಗಳಲ್ಲಿ ಆಗಿರುವ ನಿದರ್ಶನಗಳು ನಮ್ಮ ಮುಂದೆ ಇದೆ. ಹಲವು ರಾಜ್ಯಗಳಲ್ಲಿ ಬರಗಾಲ ಬಂದಂತಹ ಸನ್ನಿವೇಶದಲ್ಲಿ ಬಂದಂಥ ಹಣಕಾಸನ್ನು ಉಪಯೋಗ ಮಾಡಿ, ಕೈಗೆತ್ತಿಕೊಂಡಿರುವಂತಹ ಕೆಲಸಗಳನ್ನು, ಶಾಶ್ವತವಾದಂತಹ ಆಸ್ತಿಗಳನ್ನು ನಿರ್ಮಾಣ ಮಾಡಿದ್ದಾರೆ. ಮಾನ್ಯ ಎಂ.ಪಿ.ಪ್ರಕಾಶ್‌ರವರೆ, ತಮಗೆ ನಾನು ಹೇಳುವುದಿಷ್ಟೆ, ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಬೇಕೆ? ಮಾಡಬಾರದೆ? ತಾಂತ್ರಿಕತೆಯ ಮೇಲೆ ಕುಳಿತುಕೊಳ್ಳಬೇಕೆ? ಅಥವಾ ಬೇರೆ ನಿಯಮದ ಕೆಳಗೆ ವಿಷಯವನ್ನು ಚರ್ಚೆ ಮಾಡಬೇಕೆ? All together it is all different thing. ನಾನು ಪ್ರತಿನಿಧಿಸಕ್ಕಂಥ ಕ್ಷೇತ್ರದಲ್ಲಿ 25 ಗ್ರಾಮ ಪಂಚಾಯತ್‌ಗಳು ಇವೆ. ಒಂದು ಗ್ರಾಮ ಪಂಚಾಯತ್‌ಗೆ ಸರಾಸರಿ 10 ರಿಂದ 12 ಸಾವಿರ ಜನಸಂಖ್ಯೆ ಎಂದು ಇಟ್ಟುಕೊಂಡರೂ, ಎಷ್ಟು ಜನಸಂಖ್ಯೆಯಾಗಬಹುದೆಂದು ಅಂದಾಜು ಮಾಡಿ. ತಾವು ಬೇಕಾದರೆ ಲೆಕ್ಕವನ್ನು ತರಿಸಿ ನೋಡಿ. ತಾವು 78 ಲಕ್ಷ ರೂಪಾಯಿಗಳೆಂದು ಏನೋ ರಿಲೀಸ್ ಮಾಡಿದ್ದೀರಿ. ಈ 78 ಲಕ್ಷ ರೂಪಾಯಿಗಳ ಲೆಕ್ಕ ಹೇಗೆಂದರೆ, ಮೇವಿಗೆ ಇಷ್ಟು ಹಣ, ಉಳಿದದ್ದು ಇಂಥಾದ್ದಕ್ಕೆ ಎಂದು ಮಾಡಿದ್ದೀರಿ. ನೀವು ಕೊಡತಕ್ಕಂಥ ಅನುದಾನ ಅಥವಾ ಏನು ಹಣವನ್ನು ಬಿಡುಗಡೆ ಮಾಡುತ್ತೀರಿ. ಅದರಲ್ಲೆ ಅವನು ಊಟವನ್ನು ತಿನ್ನಬೇಕಾ? ಅವನ ಜೀವನದ ಪ್ಲಾನ್ ಅನ್ನು ಮಾಡಿಕೊಳ್ಳಬೇಕಾ? ಅಥವಾ ಅವನಿಗೆ ಬರಬಾರದ ಸಂಕಷ್ಟ ಬಂದಿದೆ. ಅವನು ಅವನ ಬೆನ್ನಿಗೆ ನಿಮ್ಮನ್ನು ಕಟ್ಟಿಕೊಂಡು ಸಾಕಿದ್ದಾನೆ. ಅವನನ್ನು ಈ ಕಷ್ಟದಿಂದ ಪಾರು ಮಾಡಬೇಕೆಂಬ ಆಲೋಚನೆ ಏನಾದರೂ ನಿಮಗೆ ಇದೆಯೇ? ನೀವು 50 ಲಕ್ಷ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದೀರಿ. ಅದು ಒಂದು ಗ್ರಾಮ ಪಂಚಾಯತ್‌ನಲ್ಲಿ ಎರಡೂವರೆ ಸಾವಿರ ಜನರು ಕೆಲಸವನ್ನು ಮಾಡುತ್ತಾರೆ. ಆ ಹಣ ಒಂದು ದಿವಸಕ್ಕೆ ಆಗುತ್ತದೆ. ಇನ್ನು ಕುಡಿಯುವ ನೀರು, ಇದನ್ನು ಮಾನಿಟರ್ ಮಾಡುವವರು ಯಾರು? ಕೊಳವೆ ಬಾವಿಗಳನ್ನು 300 ಅಡಿಗೆ, 400 ಅಡಿಗೆ ತೋಡಿದರೆ, ನೀರು ಸಿಗುತ್ತಾ ಇತ್ತು. ನಾವು ನಿಸರ್ಗದ ಮೇಲೆ ಪ್ರಯೋಗವನ್ನು ಮಾಡಿದ್ದೇವೆ. ನಾವು 600 ಅಡಿ, 700 ಅಡಿ, 800 ಅಡಿಯವರೆಗೂ ಕೊಳವೆ ಬಾವಿಯನ್ನು ಕೊರೆದಿದ್ದೇವೆ. ಮೊದಲಿಗೆ 300 ಅಡಿಗೆ

ನೀರು ಸಿಕ್ಕರೆ, ನಾವು ಹ್ಯಾಂಡ್ ಪಂಪ್ ಅನ್ನು ಫಿಕ್ಸ್ ಮಾಡಬಹುದಾಗಿತ್ತು. ಇವತ್ತು 300 ಅಡಿಗೆ ನೀರು ಸಿಗುವುದಿಲ್ಲ, 700 ಅಡಿ, 800 ಅಡಿಗೆ ಹೋಗಿದ್ದೇವೆ. ನೀವು ಕೊಡುವ ಹ್ಯಾಂಡ್ ಪಂಪ್‌ನಿಂದ ನೀರನ್ನು ಮೇಲೆ ಎತ್ತುವುದಕ್ಕೆ ಸಾಧ್ಯವಿಲ್ಲ. ನೀವು ಅನಿವಾರ್ಯವಾಗಿ ಪಂಪ್ ಮೋಟಾರ್ ಅನ್ನು ಕೊಡಬೇಕಾಗುತ್ತದೆ. ಯಾವ ಊರಿನಲ್ಲಿ ಕೊಳವೆ ಬಾವಿಗಳನ್ನು ತೋಡಿದ್ದಾರೆ? ಅದು ಎಷ್ಟು ಅಡಿ ಆಳದಲ್ಲಿ ನೀರು ಸಿಕ್ಕಿದೆ? ಅದನ್ನು ಎಷ್ಟಕ್ಕೆ ನಿಲ್ಲಿಸಿದ್ದಾರೆ? ಅಲ್ಲಿಂದ ನೀರನ್ನು ಎತ್ತಬೇಕಾದರೆ, ಎಷ್ಟು horse power motor ಬೇಕು? ಅದಕ್ಕೆ ಸಂಯೋಜನೆ ಮಾಡುವುದಕ್ಕೆ ಪಂಪ್ ಎಷ್ಟು ಸ್ಟೇಜ್ ಇರಬೇಕು? ಎಲೆಕ್ಟ್ರಿಸಿಟಿ ಪರಿಸ್ಥಿತಿ ಏನು? ಆ ಊರಿನಲ್ಲಿ ತಕ್ಷಣ ಕಾರ್ಯ ಆರಂಭ ಮಾಡದೇ ಹೋದರೆ, ಕುಡಿಯುವ ನೀರಿಗೆ ಆ ಜನರ ಗತಿ ಏನು? ಅವರು ಅದಕ್ಕೆ ಎಷ್ಟು ದೂರ ಹೋಗಬೇಕಾಗುತ್ತದೆ? ನಿಮಗೆ ಈ ಬಗ್ಗೆ ರಿಪೋರ್ಟ್ ಕೊಡುವವರು ಯಾರು? ಇವತ್ತು ಗೌವರ್ನಮೆಂಟ್‌ನಲ್ಲಿ ಇದಕ್ಕೆ ಏನು ಅರೆಂಜ್‌ಮೆಂಟ್ಸ್ ಇದೆ? ನಮ್ಮ ಎಗ್ಸಿಸ್ಟಿಂಗ್ ಮೆಷನರಿಯಲ್ಲಿ ಜಿಲ್ಲಾ ಪಂಚಾಯತ್‌ನ JE ಕೊಡುತ್ತಾನಾ? ಗ್ರಾಮ ಪಂಚಾಯತ್‌ನ ಸೆಕ್ರೆಟರಿ ಕೊಡುತ್ತಾನಾ? ವಿಲೇಜ್ ಪಂಚಾಯತ್‌ನ ಅಧ್ಯಕ್ಷ ಕೊಡುತ್ತಾನಾ? ಎಂ.ಎಲ್.ಎ. ಕೊಡುತ್ತಾರಾ? ತಾಲ್ಲೂಕು ಪಂಚಾಯತ್‌ನ ಮೆಂಬರ್ ಕೊಡುತ್ತಾರಾ? ಜಿಲ್ಲಾ ಪಂಚಾಯತ್‌ನ ಮೆಂಬರ್ ಕೊಡುತ್ತಾರಾ? ಅಥವಾ EO ಕೊಡುತ್ತಾರಾ? ಅಥವಾ ತಹಶೀಲ್ದಾದರರು ಕೊಡುತ್ತಾರಾ? ಯಾರು ಯಾರಿಗೆ ಕಮ್ಯೂನಿಕೇಟ್ ಮಾಡುವವರು? ಮೊಟ್ಟ ಮೊದಲನೆಯದಾಗಿ ಜನರ ಬವಣೆಯನ್ನು ಗೋಳನ್ನು, ಕಷ್ಟವನ್ನು, ಸರ್ಕಾರಕ್ಕೆ ತಲುಪಿಸುವಂತಹ ವಿಧಾನವೇ ಇಲ್ಲ. ಬೋರ್‌ವೆಲ್ ಅನ್ನು ಕೊರೆಯುವುದಕ್ಕೆ ಹಣವನ್ನು ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಕೊಡುತ್ತಾರೆ, ಪಂಪ್, ಮೋಟಾರ್ ಅನ್ನು ಡೆಪ್ಯೂಟಿ ಕಮೀಷನರ್ ಕೊಡುತ್ತಾರೆ. ಅವರಿಬ್ಬರ ಮಧ್ಯೆ ಎಷ್ಟು ಬೇಗ ಕೊ ಆರ್ಡಿನೇಷನ್ ಆಗುತ್ತದೆ. ಈ ಮೀಟಿಂಗ್ ಅನ್ನು ಮಾಡುವಂಥವರು ಯಾರು? Day to day monitor ಮಾಡುತ್ತಿದ್ದಾರಾ? ಇವತ್ತು ನೋಡಿದಂತಹ ಕೊಳವೆ ಬಾವಿ ನಾಳೆ ಡ್ರೈ ಆಗುತ್ತಿದೆ. ಬೇರೆ ಎಲ್ಲಾ ವಿಚಾರಗಳಿಗೆ ಡೇಟ್ ಹಾಕಬಹುದು. ನಾವು ಅವರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಏನು ಮಾಡಬೇಕು? ಎಷ್ಟು ಜನರಿಗೆ ಕೂಲಿ ಸಿಗಬೇಕು? ಆ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇಲ್ಲ. ನೀವು ಎಷ್ಟು ಜನರಿಗೆ ಕೂಲಿ ಕೊಡುತ್ತಿದ್ದೀರೆಂಬ ಇನ್‌ಫರ್‌ಮೇಷನ್ ನಿಮ್ಮ ಹತ್ತಿರ ಇದೆ.

ನೀವು ಕೊಡುತ್ತಿರುವಂಥ ಸಂಖ್ಯೆ ಅಲ್ಲಿ ಬವಣೆಗೊಳಗಾಗಿರುವ ಜನರು ಯಾರು ಇದ್ದಾರೆ, ಅದಕ್ಕೆ ಮ್ಯಾಚ್ ಆಗುತ್ತದಾ? ನಾನು ಒಂದು ನಿಮಿಷಕ್ಕೆ ಇದು ಆಡಳಿತ ಪಕ್ಷದ ಸಮಸ್ಯೆ, ನಾನು ವಿರೋಧ ಪಕ್ಷದಲ್ಲಿ ಇದ್ದೇನೆ. ನಾನು ಮಾತನಾಡಬೇಕೆಂದು ಮಾತನಾಡುತ್ತಿಲ್ಲ, ಕಲೆಕ್ಟೀವ್ ಆಗಿ ತಮಗೆ, ನಮಗೆ ಎಲ್ಲರಿಗೂ ಈ ವಿಚಾರದಲ್ಲಿ ರೆಸ್ಪಾನ್ಸಿಬಿಲಿಟಿ ಇದೆ. ಇದು ರಾಜ್ಯದ ಮೇಲೆ ಬಂದು ಬಿದ್ದಿರುವಂತಹ ಸಂಕಷ್ಟವಾಗಿದೆ. ನಾವೆಲ್ಲರೂ ಕೂಡ ಕಲೆತು ಯಶಸ್ವಿಯಾಗಿ ಈ ಕೆಲಸವನ್ನು ನಿರ್ವಹಣೆ ಮಾಡಬೇಕಾಗಿದೆ. ಮೊನ್ನೆ ಒಂದು ವಾರದ ಕೆಳಗೆ ರೆವಿನ್ಯೂ ಮಿನಿಸ್ಟರ್‌ರವರು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ನಾವೆಲ್ಲರೂ ಅವರಿಗೆ ಕಾದಿದ್ದು, ಅವರೊಡನೆ ಕುಳಿತು ಅವರಿಗೆ ನಾವೆಲ್ಲರೂ ಸಲಹೆಗಳನ್ನು ಕೊಟ್ಟೆವು. ನೀವು ಬರುವುದಕ್ಕೆ ಮೊದಲು ಏನು ಪರಿಸ್ಥಿತಿ ಇತ್ತು? ನೀವು ಬಂದು ಹೋದ ಮೇಲೆ ಏನು ಪರಿಸ್ಥಿತಿ ಆಗಿದೆ Is there any improvement? ನಮಗೆ ಫೋನ್ ಮಾಡುತ್ತಲೆ ಇದ್ದಾರೆ, ಬಾವಿ ಇಲ್ಲ, ದುಡ್ಡು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಪಂಪ್, ಮೋಟಾರ್ ಇಲ್ಲವೆಂದು ಹೇಳುತ್ತಾರೆ. ನಾವು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ, ಬಿಡುಗಡೆ ಮಾಡುವವರು ಇಲ್ಲ. ನಾವೆಲ್ಲರೂ ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ನಿರ್ವಹಣೆಯನ್ನು ಮಾಡಿದ್ದೇವೆ. ನಾವು ಜನಪ್ರತಿನಿಧಿಗಳು ಜೀವಂತವಾಗಿ ಇದ್ದೇವೆಂದರೆ, ಇದಕ್ಕೆ ಸಕಾಲದಲ್ಲಿ ಪ್ರತಿಕ್ರಿಯಿಸದೇ ಹೋದರೆ, ಸ್ಪಂದಿಸದೇ ಹೋದರೆ, ನಾವು ಇದ್ದಂತೆ ಲೆಕ್ಕನಾ, ಸತ್ತಂತೆ ಲೆಕ್ಕನಾ? ನಾವು ಇನ್ನು ಏನು ಮಾಹಿತಿಯನ್ನು ನಿಮ್ಮ ಮನವೊಲಿಸುವುದಕ್ಕೆ ಕೊಡಬೇಕು? ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವುದರಲ್ಲಿ ವಿಫಲವಾಗಿದೆಯೆಂದು ಹೇಳುವುದಕ್ಕೆ, ನಾನು ಯಾವ arithmetic jugglery ಮಾಡುವುದಕ್ಕೆ ಹೋಗುವುದಿಲ್ಲ, ಡಿಟೈಲ್ಸ್ ಅನ್ನು ಕೊಡುವುದಕ್ಕೆ ಹೋಗುವುದಿಲ್ಲ. ಅಲ್ಲಿಂದ ಅಷ್ಟು ಕೋಟಿ ರೂಪಾಯಿಗಳು ಬಂತು, ಇಲ್ಲಿಂದ ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಪಾಸ್ ಬುಕ್ ಇಷ್ಟು ಇದೆ, ಇಷ್ಟು ಸೇವಿಂಗ್ಸ್ ಬ್ಯಾಂಕ್ ಆಕೌಂಟ್‌ನಲ್ಲಿದೆ. ಇದು ಯಾವುದು ಬೇಕಾಗಿಲ್ಲ. ನನ್ನ ಊರಿನಲ್ಲಿರುವಂತಹ ಕೃಷಿ ಕಾರ್ಮಿಕನಿಗೆ ಕೆಲಸ ಇಲ್ಲ. ನನ್ನ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಬಂದಿದೆ, ನೀರು ಇಲ್ಲ. ನಾನು ಕೃಷಿ ಕಾರ್ಮಿಕ ಈಗ ಬರಗಾಲ ಬಂದಿರುವುದರಿಂದ ಜೀವನಕ್ಕೆ ಬೇರೆ ಉಪಾಯವಿಲ್ಲ, ಹಸಿವಿನಿಂದ ನರಳುತ್ತಿದ್ದೇನೆ. ಸಂವಿಧಾನ ಬದ್ಧವಾಗಿ ಹಸಿವಿನಿಂದ ನರಳುತ್ತಿರುವ ಒಬ್ಬ ಪ್ರಜೆಯನ್ನು ಕಾಪಾಡುವಂತಹ ಹೊಣೆ ನಿಮ್ಮ

ಮೇಲೆ ಇದೆಯೇ? ಇಲ್ಲವೇ? ನಾನು ಇನ್ನು ಏನು ಹೆಚ್ಚಿಗೆ ಕೇಳುವುದಕ್ಕೆ ಹೋಗುವುದಿಲ್ಲ. ನೀವು ಈ ಬರಗಾಲದ ಪರಿಸ್ಥಿತಿಯಲ್ಲಿ ಯಾವ ಹಣವನ್ನು ಖರ್ಚು ಮಾಡುತ್ತೀರಿ? ಅದು ಒಂದು ಲಕ್ಷ ರೂಪಾಯಿಗಳಾಗಬಹುದು, ಒಂದು ಕೋಟಿ ರೂಪಾಯಿಗಳಾಗಬಹುದು, ನೂರು ಕೋಟಿ ರೂಪಾಯಿಗಳಾಗಬಹುದು. ನೀವು ಶಾಶ್ವತವಾದ ಆಸ್ತಿಯನ್ನು ನಿರ್ಮಾಣ ಮಾಡುವುದಕ್ಕೆ ಏನಾದರೂ ಆಲೋಚನೆಯನ್ನು ಮಾಡಿದ್ದೀರಾ? ಅದಕ್ಕೆ ಸುತ್ತೋಲೆಯನ್ನು ಕಳುಹಿಸಿದ್ದೀರಾ? ಖರ್ಚು ಆದ ಹಣ ಯಾವ ಬಾಬಿನಲ್ಲಿ ಖರ್ಚು ಆಗುತ್ತಿದೆಯೆಂಬುದನ್ನು ನೋಡುತ್ತಿದ್ದೀರಾ? ಈ ಕಾರ್ಯವನ್ನು ನಿರ್ವಹಿಸಲು ಯಾವ ಯಾವ ಇಲಾಖೆಗಳನ್ನು ಇದರಲ್ಲಿ ಒಳಪಡಿಸಿಕೊಂಡಿದ್ದೀರಿ? ಜಲಾನಯನ ಇಲಾಖೆಯ ವರನ್ನು ಚೆಕ್ ಡ್ಯಾಮ್‌ಗಳನ್ನು ಮಾಡಲು ಏನಾದರೂ ಒಳಪಡಿಸಿಕೊಂಡಿದ್ದೀರಾ? ಹಾಗೆ ಏನಾದರೂ ಇದ್ದರೆ ಎಲ್ಲೆಲ್ಲಿ ಮಾಡಿದ್ದಾರೆ? ಎಷ್ಟು ಮಾಡಿದ್ದಾರೆ? ರಸ್ತೆಗಳನ್ನು ಮಾಡುವುದಕ್ಕೆ ಇವರನ್ನು ಏನಾದರೂ ಉಪಯೋಗ ಮಾಡಿಕೊಂಡಿದ್ದೀರಾ? ಅಥವಾ ಜೆಲ್ಲಿಯನ್ನು ಒಡೆದು ಖಾಯಂ ರಸ್ತೆಯನ್ನು ಮಾಡುವುದಕ್ಕೆ ಆದಕ್ಕೆ ಸಂಬಂದಪಟ್ಟ ಕಾರ್ಮಿಕರು ಯಾರು ಇದ್ದಾರೆ. ಅವರನ್ನು ಏನಾದರೂ ಕಾರ್ಯ ನಿರತರನ್ನಾಗಿ ಮಾಡಿದ್ದೀರಾ? ಈ ಯಾವ ಪ್ರಶ್ನೆಗೂ ಉತ್ತರವಿಲ್ಲ. Task Force Resolution ನಾವು ಶಾಸಕರಾಗಿ ಯಾವ ಯಾವ ಹಳ್ಳಿಯಿಂದ , ಯಾವ ಯಾವ ಗ್ರಾಮದಿಂದ ಯಾವ ಯಾವ ಬೇಡಿಕೆ ಬಂದಿದೆ. ಆ ಎಲ್ಲಾ ಬೇಡಿಕೆಗಳನ್ನು comprehensive ಆಗಿ ಸೇರಿಸಿ, Task Force Resolution ಮಾಡಿದ್ದೇವೆ. ಯಾವ ಸಮಯದಲ್ಲಾದರೂ ಹಣ ಬರಬಹುದು. ಕಡೆ ಪಕ್ಷ ಒಂದು ಗ್ರಾಮ ಪಂಚಾಯತ್ ಒಳಗೆ 10, 15, ಗ್ರಾಮಗಳು ಇರುವಂತಹ ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಕನಿಷ್ಟ ಒಂದು ಲಕ್ಷ ರೂಪಾಯಿಗಳ, ಒಂದೂವರೆ ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲವೆಂದರೆ, ನಾವು ನಾಮಕಾವಸ್ಥೆಗೆ ಈ ಕೆಲಸವನ್ನು ಮಾಡುತ್ತಿದ್ದೆವಾ? ಅಥವಾ ನಿಜವಾಗಲು ಆ ವರ್ಗದ ಜನರಿಗೆ ಇರುವಂತಹ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ, ನೀಗಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವಾ? ನಾನು ಹೇಳುವಂತಹ ರೀತಿಯಲ್ಲಿ ಕೆಲಸವನ್ನು ಮಾಡುವುದಿದ್ದರೆ, ಆ ಮಾಹಿತಿ ಇದ್ದರೆ ದಯಮಾಡಿ ಮಾಹಿತಿಯನ್ನು ಕೊಡಿ. ತಾವು ಎಷ್ಟು ಪಂಚಾಯತ್‌ಗಳಲ್ಲಿ ಎಷ್ಟೆಷ್ಟು ಹಣವನ್ನು ವಿನಿಯೋಗ ಮಾಡಿದ್ದೀರಿ? ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರೆಂಬುದನ್ನು

ದಯಮಾಡಿ ಹೇಳಿ? ವಿಧಾನ ಸಭೆಯ ಅಧಿವೇಶನ ಪ್ರಾರಂಭವಾಗುತ್ತದೆಂಬ ಸೂಚನೆ ಬಂದ ಕೂಡಲೇ, ಸುಮಾರು 350 ಗ್ರಾಮಗಳಿಗೂ ಕೂಡ ನಮ್ಮಲ್ಲೂ ಆ ಮಾಹಿತಿ ಇದೆ. ಬೆಳಿಗ್ಗೆ 7 ಗಂಟೆ, 7.30 ಗಂಟೆ ಹೊರಟರೆ ರಾತ್ರಿ 11.00 ಗಂಟೆಯವರೆಗೂ, ಒಂದು ಸಣ್ಣ ಮುಜರಾಯಿ ಗ್ರಾಮವನ್ನು ಕೂಡ ಬಿಡದೆ, ಯಾರು ಎಲ್ಲಿ ಏನು ಹೇಳುತ್ತಾರೊ, ಎಲ್ಲಿ ನಮ್ಮ ಮೇಲೆ ಅಪಾದನೆ ಬರುತ್ತದೊ, ಹೇಳುವವರು ಸರಿಯಾದ ವರ್ತಮಾನವನ್ನು ಕೊಡುತ್ತಾರೋ, ಇಲ್ಲವೋ, ಎಂದು ಹೇಳಿ, ಪ್ರತಿ ದಿವಸ ಪ್ರತಿ ಹಳ್ಳಿಗೂ ಹೋಗುತ್ತಿದ್ದದ್ದು, ನಮಗೆ ಚುನಾವಣೆಯ ಪ್ರಚಾರವಾದ ಹಾಗೆ ಆಗಿದೆ. ನಾವು ವಾಪಸ್ಸು ಬರುವುದು ರಾತ್ರಿ 11.00 ಗಂಟೆಯಾಗುತ್ತಿತ್ತು. ನಾವು ಹೋದ ತಕ್ಷಣ ಕುಡಿಯುವ ನೀರಿನ ಬಗ್ಗೆ ಕೇಳಿದ್ದೇವೆ. ಅನೇಕ ಕಡೆ ಈ ಸಮಸ್ಯೆ ಇದೆ. ಆ ಸಮಸ್ಯೆಯನ್ನು ಪರಿಹಾರ ಮಾಡುವುದರಲ್ಲಿ ನಮ್ಮ ಪಾತ್ರ ಏನಿದೆ, ಅದು ಸಂಪೂರ್ಣ ಸೊನ್ನೆ. ಇದು ನಮಗ್ಯಾರಿಗೂ ಕೂಡ ಗೌರವ ತರತಕ್ಕಂಥಾದ್ದು ಅಲ್ಲ. ರಾಜಕಾರಣ ಮಾಡಲಿಕ್ಕೆ ಸಾಕಷ್ಟು ವಿಚಾರಗಳಿವೆ. ನಮಗೆ ಯೋಗ್ಯತೆ, ನೈಪುಣ್ಯತೆ, ಚೈತನ್ಯ, ಶಕ್ತಿ ಇದ್ದರೆ ನಾವು ರಾಜಕಾರಣ ಮಾಡುತ್ತೇವೆ. ಬರಗಾಲದಲ್ಲಿ ರಾಜಕಾರಣವನ್ನು ಮಾಡತಕ್ಕಂಥ ನೀಚತನಕ್ಕೆ ನಾವು ಹೋಗುವುದಿಲ್ಲ. ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದಂತೆ ಈಗ ಎಲ್ಲವೂ ಆಕಸ್ಮಿಕಗಳೇ. ಆಕಸ್ಮಿಕವಾಗಿ ನೀವು ಅಲ್ಲಿ ಕುಳಿತಿದ್ದೀರಿ, ಸರ್ಕಾರ ನಡೆಸುತ್ತಿದ್ದೀರಿ. ಆಕಸ್ಮಿಕವಾಗಿ ನಾವು ಇಲ್ಲಿದ್ದೇವೆ. ಆದ್ದರಿಂದ ಆಕಸ್ಮಿಕವಾಗಿ ಈ ಹೊತ್ತು ಆ ಜವಾಬ್ದಾರಿ ನಿಮ್ಮ ಮೇಲಿದೆ. ಇವತ್ತಿನ ಸರ್ಕಾರವಾದಂಥ ನೀವು ಈ ಒಂದು ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತನ್ನು, ಎಲ್ಲ ಸ್ಪಷ್ಟ ಆಧಾರಗಳ ಮೇಲೆ ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುತ್ತಿದ್ದೇನೆ. ಈ ಸದನದ ಕಲಾಪವನ್ನು ಮುಂದೂಡಿ, ತಕ್ಷಣ ಬರಗಾಲದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಇದಕ್ಕಿಂತ ಯೋಗ್ಯವಾದಂಥ ವಿಷಯವಿಲ್ಲ, ಇದಕ್ಕಿಂತಲೂ ಹೆಚ್ಚು ವಿವರಗಳು ಬೇಕಾಗಿಲ್ಲ. ಅದಕ್ಕೆ ಈಗ ಅಗತ್ಯವಿರತಕ್ಕಂಥಾದ್ದು ಎಂದರೆ ಒಂದು ಮನಸ್ಸು. ನಿಮಗೆ ಆ ದಿಟ್ಟವಾದಂಥ ಮನಸ್ಸು ಬರಬೇಕು. ಆಡಳಿತ ನಡೆಸತಕ್ಕಂಥವರಿಗೆ ಬುದ್ಧಿ ಇರಬೇಕಾಗುತ್ತದೆ. ಆಡಳಿತ ನಡೆಸತಕ್ಕಂಥ ರಾಜಕಾರಣಗಳಿಗೆ ಹೃದಯ ಇರಬೇಕಾಗುತ್ತದೆ. ನೀವು ಹೃದಯವಂತರಾಗಿ ಕೆಲಸ ಮಾಡಬೇಕು. ನಾನು ತಮ್ಮಲ್ಲಿ ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ರಾಜ್ಯದಲ್ಲಿ ಕಿತ್ತು ತಿನ್ನುತ್ತಿರತಕ್ಕಂಥ ಈ ಒಂದು ಕಷ್ಟದ ಸಮಸ್ಯೆಯ ಕಡೆಗೆ ನಮ್ಮ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು, ನಾವು ಮಂಡಿಸಿರುವ

ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು ಎಂದು ನಾವು ತಮಗೆ ಏನು ಮನವಿಯನ್ನು ಸಲ್ಲಿಸಿದ್ದೇವೆ, ಇದಕ್ಕೆ ಈ ಕೂಡಲೇ ತಮ್ಮ ಅಂಗೀಕಾರವನ್ನು ಕೊಟ್ಟು, ಎಲ್ಲ ಕಲಾಪವನ್ನು ಮುಂದೂಡಿ, ತಕ್ಷಣ ಇದನ್ನು ತೆಗೆದುಕೊಳ್ಳೇಕು ಎಂದು ಹೇಳಿ, ನನ್ನ ಮಾತುಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ನಮ್ರ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಹಿರಿಯರಾದಂಥ ಸದಸ್ಯರು ಧ್ವನಿಗೂಡಿಸಿ, ಇದೊಂದು ಬಹಳ ಮಹತ್ವವಾದ ವಿಷಯವಾಗಿರುವುದರಿಂದ, ಅಧಿಕಾರದಲ್ಲಿರುವವರಿಗೆ ಬುದ್ಧಿ ಮತ್ತು ಮನಸ್ಸು ಎರಡೂ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಹೃದಯವೂ ಇರಬೇಕೆಂದು ಹೇಳಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಹೃದಯವೂ ಇರಬೇಕೆಂದು ಹೇಳಿದ್ದಾರೆ. ಅದು ಹೇಳುವ ಒಂದು idiom. ಹೃದಯವೆಂದರೆ ಅದು ಹೃದಯವೇ. ಅದರಲ್ಲಿ ಅನುಕಂಪದ ಹೃದಯ, ಕರುಣೆಯ ಹೃದಯ, ಕಠಿಣ ಹೃದಯ ಎಂದು ಇರುವುದಿಲ್ಲ. It cannot be a hard heart or soft heart ಅದೇನಾದರೂ ಇದ್ದುಕೊಳ್ಳಲಿ, ಅದರ ಬಗ್ಗೆ ಈಗ ಬೇಡ. ಆದರೆ ಅಧಿಕಾರಕ್ಕೆ ಸ್ನೇಹಿತರು ಇರುವುದಿಲ್ಲ ಎನ್ನುವುದು ಮಾತ್ರ ನನಗೆ ಗೊತ್ತು. ಏಕೆಂದರೆ, ಅಧಿಕಾರದಲ್ಲಿದ್ದಂಥವರಿಗೆ ಅನೇಕ ಸಂದರ್ಭಗಳಲ್ಲಿ ಸ್ನೇಹಿತರು ಇರುವುದಿಲ್ಲ. ತಪ್ಪು ಕಂಡುಹಿಡಿಯತಕ್ಕಂಥಾದ್ದೂ ಕೂಡ ಬಹಳ ಮುಖ್ಯವಾಗಿರತಕ್ಕಂಥಾದ್ದು. ಅಧಿಕಾರದಲ್ಲಿರತಕ್ಕಂಥವರು ಟೀಕಾಚಿತ್ತರಾಗಿರಲಿಕ್ಕೆ ಸಾಧ್ಯವೇ ಇಲ್ಲ, ಚರ್ಚೆಗೆ ಒಳಗಾಗಲೇ ಬೇಕಾಗುತ್ತದೆ. ಈಗ ಇಲ್ಲಿ ಹಿರಿಯ ಸದಸ್ಯರು ಮಾಡಿರುವ ಪ್ರಸ್ತಾಪದ ಬಗ್ಗೆ ಈ ಸರ್ಕಾರದಲ್ಲಿ ಯಾವುದೇ ತರವಾದಂಥ ಆಕ್ಷೇಪಣೆಗಳಿಲ್ಲ. ಚರ್ಚೆ ಮಾಡಲಿಕ್ಕೆ ಈ ಸರ್ಕಾರ ಹಿಂಜರಿಯುವುದಿಲ್ಲ. ಅವರು ಯಾವಯಾವ ವಿಷಯವನ್ನು ಪ್ರಸ್ತಾಪಿಸಿ, ಮಾಹಿತಿಯನ್ನು ಪಡೆಯಬೇಕೆಂದು ಬಯಸುತ್ತಿದ್ದಾರೆ, ಆ ಎಲ್ಲ ಮಾಹಿತಿಗಳೂ ನಮ್ಮ ಹತ್ತಿರ ಇವೆ. ಆದರೆ, ಈಗಿರತಕ್ಕಂಥ ಪ್ರಶ್ನೆಯೆಂದರೆ, ಈ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಿದ್ದರೆ ಅದು ನಿಲುವಳಿ

ಸೂಚನೆಯ ರೂಪದಲ್ಲಿಯೇ ಬರಬೇಕೇ ಅಥವಾ ಬೇರೆ ರೂಪದಲ್ಲಿ ಬರಬೇಕೇ ಎನ್ನುವುದು. ಬೇರೆ ರೂಪದಲ್ಲಿ ಬರಬೇಕಾಗಿದ್ದರೆ, ಅದು ಯಾವ ನಿಯಮಾವಳಿಗಳಡಿಯಲ್ಲಿ ಬಡರಬೇಕು? ಮತ್ತು ನಾವು ಅನೇಕ ಇಂಥ ಮಹತ್ವದ ವಿಚಾರಗಳನ್ನು ಚರ್ಚೆ ಮಾಡುವಾಗ ನಿಲುವಳಿ ಸೂಚನೆಗಳನ್ನು ತರಬೇಕಾದಂಥ ಸನ್ನಿವೇಶಗಳೇನು? ಆ ನಿಲುವಳಿ ಸೂಚನೆಯ ಜವಾಬ್ದಾರಿ ಎಷ್ಟರ ಮಟ್ಟಿಗಿರುತ್ತದೆ? ಯಾವ ಸನ್ನಿವೇಶದಲ್ಲಿ ತಾವು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎನ್ನುವ ಬಗ್ಗೆ ತಾವು, ಮಾನ್ಯ ರಮೇಶ್ ಕುಮಾರ್ ರವರು ಆ ಸ್ಥಾನದಲ್ಲಿದ್ದಂಥ ಸಂದರ್ಭಗಳಲ್ಲಿ ಕೊಟ್ಟಿರತಕ್ಕಂಥ ತೀರ್ಮಾನಗಳು, ಅದಕ್ಕೂ ಹಿಂದೆ ಇದ್ದಂಥ ನಮ್ಮ ಅನೇಕ ಘನವೆತ್ತ ಸ್ಪೀಕರ್‌ಗಳು ಕೊಟ್ಟಿರತಕ್ಕಂಥ ತೀರ್ಮಾನಗಳ ಆಧಾರದ ಮೇಲೆ, ನಮ್ಮ ಸಭೆಯ ಕಾರ್ಯಕಲಾಪಗಳನ್ನು ನಾವು ನಡೆಸಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ, ಅಕಸ್ಮಾತ್ ಈ ಸರ್ಕಾರ ಈ ನಿಲುವಳಿ ಸೂಚನೆಯನ್ನು ತಾಂತ್ರಿಕ ಕಾರಣಗಳಿಗಾಗಿ ವಿರೋಧ ಮಾಡಿಕೊಂಡು, ಅದರ ಮೂಲಕವಾಗಿ ರಕ್ಷಣೆಯನ್ನು ಪಡೆಯುತ್ತಿದೆ ಎಂದು ತಾವು ಅನ್ಯಥಾ ಭಾವಿಸಬಾರದು. ಈ ಸದನದಲ್ಲಿ ಮತ್ತು ಸದನದ ಹೊರಗಡೆ ಎಲ್ಲ ರೀತಿಯ ಚರ್ಚೆಗೆ ಮುಕ್ತ ವಾತಾವರಣವಾಗಬೇಕು ಮತ್ತು ಅದಕ್ಕೆ ಉತ್ತರವನ್ನು ಕೊಡಬೇಕು. ಅದಕ್ಕೆ ಇದು ನಿಜವಾಗಿಯೂ ಒಂದು ಸವಾಲು ಮತ್ತು ಒಂದು ಅವಕಾಶ ಎಂದು ನಾವು ಭಾವಿಸಿಕೊಂಡಿದ್ದೇವೆ. ಇಂಥ ಒಂದು ದೊಡ್ಡ ವೇದಿಕೆ ನಮ್ಮ ಸರ್ಕಾರಕ್ಕೆ ಮತ್ತೆ ಸಿಗುವುದಿಲ್ಲ. ನಾವು ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದೇವೆ, ಕೇಂದ್ರ ಸರ್ಕಾರ ನಮಗೆ ಎಷ್ಟರಮಟ್ಟಿಗೆ ಪ್ರತಿಕ್ರಿಯಿಸಿದೆ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಯಾವ ರೀತಿಯಾಗಿದೆ ಮತ್ತು ಇಂಥ ವಿಚಾರಗಳ ಬಗ್ಗೆ ನಾವು ಹೊರಗಡೆ ಇರತಕ್ಕಂಥ ಜನತೆಗೆ ಈ ಸದನದ ಮೂಲಕ ತಿಳಿಸಲೇಬೇಕಾಗಿರತಕ್ಕಂಥ ಜವಾಬ್ದಾರಿ ವಿರೋಧ ಪಕ್ಷದವರಿಗಿಂತಲೂ ಹೆಚ್ಚಾಗಿ ಆಡಳಿತ ಪಕ್ಷದ ಮೇಲೆ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾವು ಕೇಳಿರತಕಂಥಾದ್ದರ ಬಗ್ಗೆ ನಮ್ಮದೇನೂ ಆಕ್ಷೇಪಣೆಗಳಿಲ್ಲ. ಆದರೆ, ಯಾವಾಗ ನಿಲುವಳಿ ಸೂಚನೆಯನ್ನು ತರಬಹುದು ಮತ್ತು ಯಾವ ಸಂದರ್ಭದಲ್ಲಿ ತಂದಾಗ ಅದಕ್ಕೆ ಅನುಮತಿಯನ್ನು ಕೊಡಬೇಕಾದುದಿಲ್ಲ ಎನ್ನುವುದನ್ನು ಮತ್ತು ಬೇರೆ ಒಂದು ಅವಕಾಶವಿದ್ದಾಗ ನಿಲುವಳಿ ಸೂಚನೆಯನ್ನು ತರಬೇಕಾದಂಥ ಅಗತ್ಯವಿಲ್ಲ ಎನ್ನುವುದಕ್ಕೆ, ಹಿಂದೆ ಇದೇ ಸದನದಲ್ಲಿ ಇಂಥಾದ್ದೇ ಒಂದು ಸನ್ನಿವೇಶ ಬಂದಾಗ,

"On 27th January of 1970, the Hon'ble Members Sri T.R.Shamanna and Sri H.M.Channabasappa and Sri K.Rajaiah Shetty had given notices of adjournment motion regarding acceptance of higher tender by the Bangalore Water Supply and Sewerage Board and requested the Chair to give a consent for moving them"

ಎನ್ನತಕ್ಕಂಥ ಒಂದು ವಿಷಯದ ಮೇಲೆ ಮಾತನಾಡುತ್ತಾರೆ. ಆ ವಿಷಯ ಬಂದಾಗ ಅಲ್ಲಿ ಇಂಥಹುದೇ ಒಂದು ಸನ್ನಿವೇಶವಿತ್ತು. ಆಗ ಅವರು ಹೇಳುತ್ತಾರೆ,

"I am also as much interested in the matter as all the Hon'ble Members who have raised this. Now, the question is whether the normal business namely the motion of thanks to the Governor's speech should be adjourned to take up this business. The only point that lays with me is whether all these matters cannot be raised during the present debate and whether a separate time should be allotted for it? The Hon'ble Member Sri R.Dayananda Sagar has stated his case in a very powerful way and others also may do likewise. The matter raised is important. I do not want to under estimate its importance. But, the Members may take advantage of the opportunity now available to them and express their views and the Government is bound to give a reply to it. I have also admitted a call attention note. When a Member calls the attention of the Minister to the

matter, the Government has got to make a statement. Under these circumstances, I am sorry, I cannot give my consent to this motion and also I withhold my consent."

ಇಲ್ಲಿ, ಸನ್ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಘನವೆತ್ತ ರಾಜ್ಯಪಾಲರು ದಯಪಾಲಿಸಿರತಕ್ಕಂಥ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುವಂಥ ಒಂದು ವಿಷಯವನ್ನು ತಮಗೆ ಕೊಟ್ಟಿದ್ದಾರೆ. ಅದನ್ನು ನಮ್ಮ ಮಾನ್ಯ ರಾಜಣ್ಣನವರು ಅನುಮೋದಿಸಿದ್ದು, ಅದು ಈಗಾಗಲೇ ಸ್ವೀಕೃತವಾಗಿದೆ. ಅದು ಇವತ್ತಿನ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಕೂಡ ಇದೆ. ರಾಜ್ಯಪಾಲರು ಮಾಡಿರತಕ್ಕಂಥ ಭಾಷಣದ ಮೇಲಿನ ವಂದಾನಾ ನಿರ್ಣಯದ ಮೇಲೆ ಮಾತನಾಡುವಾಗ ಅನೇಕ ವಿಷಯಗಳನ್ನು, ರಾಜ್ಯ ಸರ್ಕಾರದ ವೈಫಲ್ಯಗಳನ್ನು, ಅದು ದೂರದೃಷ್ಟಿರಹಿತವಾಗಿ ಕೆಲಸ ಮಾಡಿದಂಥ ವಿಷಯಗಳನ್ನು ಚರ್ಚೆ ಮಾಡಲು ಬೇಕಾದಷ್ಟು ಅವಕಾಶಗಳಿರುವಂಥ ಸನ್ನಿವೇಶದಲ್ಲಿ, ಎಲ್ಲ ಕಾರ್ಯಕಲಾಪಗಳನ್ನು ಮುಂದೂಡಿ, ಇದು ಬಹಳ ಮಹತ್ವದ್ದು ಅನ್ನತಕ್ಕಂಥಾದ್ದರ ಮೂಲಕವಾಗಿ ನಿಲುವಳಿ ಸೂಚನೆಯನ್ನು ತರಬೇಕಾದಂಥ ಅಗತ್ಯವಿರಲಿಲ್ಲ. ನಿಲುವಳಿ ಸೂಚನೆಯನ್ನು, ತೀರಾ ಇತ್ತೀಚೆಗೆ ಆದ, ಅತ್ಯಂತ ಮುಖ್ಯವಾಗಿರತಕ್ಕಂಥ ವಿಷಯದ ಬಗ್ಗೆ ತರಬೇಕು. ಇದು ಬಹಳ ಪ್ರಮುಖವಾದಂಥ ವಿಷಯ. ಬರಗಾಲ ಎಲ್ಲರಿಗೂ ಸಂಬಂಧಪಟ್ಟಿರತಕ್ಕಂಥಾದ್ದು, ಈ ಹಸಿವಿಗೆ ಯಾವುದೇ ತರವಾದಂಥ ರಾಜಕೀಯ ಲೇಪನಗಳನ್ನು ಹಚ್ಚಬೇಕಾದಂಥ ಅಗತ್ಯತೆ ಇಲ್ಲ. ಇಂಥಾದ್ದನ್ನು ನಿರ್ವಹಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ಅದು ಸರ್ಕಾರವೇ ಅಲ್ಲ. ಆ ಕಾರಣಕ್ಕಾಗಿ ತಾವು ಕೊಡುವಂಥ ಸಲಹೆಗಳನ್ನು, ಸೂಚನೆಗಳನ್ನು ನಾವು ಸ್ವೀಕರಿಸಬೇಕಾಗುತ್ತದೆ. ಈಗ ನನ್ನ ಆಕ್ಷೇಪಣೆ ಇರತಕ್ಕಂಥಾದ್ದು ಇಷ್ಟೇ, ನಿಲುವಳಿ ಸೂಚನೆಯ ರೂಪದಲ್ಲಿ ಇದನ್ನು ಚರ್ಚೆಗೆ ತೆಗೆದುಕೊಂಡು, ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಮಾಡುವುದಕ್ಕಿಂತಲೂ ಹೆಚ್ಚಾಗಿ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿಯೂ ಕೂಡ ಈ ವಿಚಾರದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬಹುದು. ಅದೂ ಕೂಡ ಒಂದು ದಾರಿಯಾಗಿದೆ. ಅಕಸ್ಮಾತ್, ಆ ದಾರಿಯಲ್ಲಿ ಹೋದರೆ ತಡವಾಗುತ್ತದೆ, ಹೇಳುವಂಥ ವಿಷಯದ ಮಹತ್ವ ಏನಿರುತ್ತದೆ, ಆ ಮಹತ್ವ ಕಡಿಮೆಯಾಗುತ್ತದೆ, ನಿಲುವಳಿ ಸೂಚನೆಗಿರುವಂಥ ಮಹತ್ವ, ವಂದನಾ ನಿರ್ಣಯದ ಮೇಲಿನ

ಚರ್ಚೆಯಲ್ಲಿ ಭಾಗವಹಿಸಿದಾಗ ಇರುವುದಿಲ್ಲ ಎನ್ನುವಂಥ ಅಭಿಪ್ರಾಯ ಹಿರಿಯ ಸದಸ್ಯರಿಗಿದ್ದರೆ, ಇದನ್ನು ಮತ್ತೊಂದು ರೂಪದಲ್ಲಿ ಕೂಡ ಚರ್ಚೆಗೆ ತೆಗೆದುಕೊಳ್ಳಬಹುದು. ನಿಯಮ 69ರ ಕೆಳಗೆ ಅದನ್ನು ನೀವು ಪರಿವರ್ತನೆ ಗೊಳಿಸಿ, ಪ್ರಶ್ನೋತ್ತರ ವೇಳೆ ಮುಗಿದ ನಂತರ ತೆಗೆದುಕೊಳ್ಳಲಿಕ್ಕೂ ಕೂಡ ಅವಕಾಶವಿದೆ. ಮತ್ತು ಆ ಪರಿವರ್ತನೆಯನ್ನು ತಾವೇ ಮಾಡಿಕೊಡಲಿಕ್ಕೆ ಕೂಡ ಅವಕಾಶವಿದೆ. ಇದರ ಜೊತೆಗೂ ಕೂಡ ಬಹಳ ಮುಖ್ಯವಾಗಿರತಕ್ಕಂಥ ನಮ್ಮವರೇ ನಮ್ಮಲ್ಲಿ ಕೊಟ್ಟಿರತಕ್ಕಂಥ ಒಂದು ನಿರ್ಣಯವಿದೆ. ಮತ್ತೊಂದು ನಿರ್ಣಯದಲ್ಲಿ "Not admissible when an ordinary parliamentary opportunity will shortly occur to discuss the subject matter" ಎಂದು ಆ ಸನ್ನಿವೇಶದಲ್ಲಿ ಹೇಳುತ್ತಾ,

> "As the hon.Members know, an adjournment motion is intended to raise a discussion on a matter which could not be otherwise discussed under the ordinary procedure of the House and will result in interrupting the appointed business of the House. In order that such interruption may be only in exceptional circumstances and for very special reasons, several restrictions have been imposed by the rules. It is also the duty of the Speaker to examine if the purpose of the adjournment motion cannot be secured without upsetting the arranged list of business. For the purpose of the present motion, it is enough to state that a uniform and long series of rulings in the House of Commons and in the Parliament of India and in our own Legislature in the past have laid down that where an ordinary parliamentary opportunity will shortly occur to discuss the subject matter of an adjournment

motion, then permission of the Speaker to the adjournment motion should be refused."

ಇದು ಬಹಳ ಪ್ರಮುಖವಾಗಿರತಕ್ಕಂಥ ಒಂದು ತೀರ್ಮಾನವನ್ನು ತಮ್ಮ ಹಿಂದಿನವರು ಇಲ್ಲಿ ಕೊಟ್ಟಿದ್ದಾರೆ. ಇದಕ್ಕೆ ಅವಕಾಶವಿದೆ. ನಮ್ಮ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿ ನಾವೇ ನಿರ್ಧರಿಸಲ್ಪಟ್ಟಿರತಕ್ಕಂಥ ಕಾರ್ಯಪಟ್ಟಿಯ ವಿಷಯಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕಾದಂಥ ಅಗತ್ಯತೆ ಇಲ್ಲ. ಒಂದು ವೇಳೆ ಅದನ್ನು ನಾವು ತೆಗೆದುಕೊಳ್ಳಲೇಬೇಕು, ಇಲ್ಲದಿದ್ದರೆ ಅದಕ್ಕೆ ಅಷ್ಟು ಮಹತ್ವ ಸಿಗಲಾರದು ಎನ್ನುವುದಾಗಿದ್ದರೆ ಸರ್ಕಾರ ಮರೆಮಾಚುವುದಿಲ್ಲ. ನಿಯಮ 69ರ ಕೆಳಗಡೆಗೆ ಅದನ್ನು ಪರಿವರ್ತನೆ ಮಾಡಿ ಅದರ ಚರ್ಚೆಗೆ ಕೂಡ ತಾವು ತೆಗೆದುಕೊಳ್ಳುವುದಕ್ಕೆ ಸರ್ವಸಮ್ಮತಿ ಇರತಕ್ಕಂಥದ್ದು ಇದೆ. ಇನ್ನು ಬೇರೆ ತಾಂತ್ರಿಕ ಕಾರಣಗಳು ಕೂಡ ಇವೆ. ಈ ಬರಗಾಲ ಎನ್ನತಕ್ಕಂಥದ್ದು ಪ್ರಾರಂಭವಾಗಿರುವುದು ತಮಗೆ ಗೊತ್ತಿದೆ. ಅದು ನಮ್ಮ ಬೆನ್ನಿಗೆ ಹಿಂದೆ ಹುಟ್ಟಿರತಕ್ಕಂಥ ಅಣ್ಣತಮ್ಮಂದಿರ ಹಾಗೆ ಇದು ಬರುತ್ತಲೇ ಇದೆ. 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಈಗಾಗಲೇ ಘೋಷಿಸಿದ್ದೇವೆ. ವಾಡಿಕೆ ಮಳೆಗಿಂತಲೂ ಕೂಡ ಶೇಕಡ 38 ರಷ್ಟು ಮಳೆ ಕಡಿಮೆಯಾಗಿ 1971ರ ಸಾಲಿನಲ್ಲಿ ತಾವೆಲ್ಲರೂ ಕೂಡ ದಿವಂಗತ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಯಾವ ದೊಡ್ಡ ಪ್ರಮಾಣದ...

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಸಚಿವರು Kindly withhold your reply.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, I am not replying. You have also said so many other things. Kindly listen to me sir. I am not yielding.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಾದಂಥ ಸಂದರ್ಭದಲ್ಲಿ ಉತ್ತರ ಕೊಡಿ. ನಮಗೆ ಮೊದಲು ಅವಕಾಶ ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಅವಕಾಶ ಇದೆ. I have not even concluded.

ಶ್ರೀ ಕೆ.ಆರ್.ರಮೇಶ್ ಕುಮಾರ್: ಉತ್ತರ ಕೊಡುವುದಕ್ಕೆ ನಿಮಗೆ ಅವಕಾಶ ಸಿಕ್ಕಿದಾಗ you can explain. You can give the reply.

ಶ್ರೀ ಎಂ.ಪಿ.ಪ್ರಕಾಶ್: ಈಗ ತಾವು ಅವರ ಮನವೊಲಿಸುವಂಥ ಸಂದರ್ಭವನ್ನು ಉಪಯೋಗಿಸಿಕೊಂಡು ರಾಜನೀತಿಯ ಅನೇಕ ವಿಚಾರಗಳನ್ನು ಹೇಗೆ ತಾವು ಪ್ರಸ್ತಾಪ ಮಾಡಿದರೋ ಹಾಗೆಯೇ ಈ ಬರಗಾಲ ಬಹಳ ತೀವ್ರವಾಗಿರತಕ್ಕಂಥದ್ದು, 128 ತಾಲ್ಲೂಕುಗಳಲ್ಲಿ ಬರಗಾಲವಿದೆ, 1971ರ ಸಾಲಿನಲ್ಲಿ ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಇದ್ದ ಬರಗಾಲದಷ್ಟೇ ಪ್ರಮಾಣದ ತೀವ್ರತೆ ಇಲ್ಲಿದೆ. ಅದರ ಬಗ್ಗೆ ನಾವು ಮುಚ್ಚಿಡಬೇಕಾಗಿರತಕ್ಕಂಥದ್ದು ಏನೂ ಇಲ್ಲವೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಿಮ್ಮ ಸಹಾಯಕ್ಕೇ ನಾನು ಬರುತ್ತಿದ್ದೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಬಹಳ ಸಂತೋಷ.

ಶ್ರೀ ಎಂ.ಪಿ.ಪ್ರಕಾಶ್: ಹೌದು. ನೀವು ಸಂತೋಷ ಪಡಲೇಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮ ಸಹಾಯಕ್ಕೆ ಬರಬೇಕಾದರೆ ಬನ್ನಿ permanently.

ಶ್ರೀ ಎಂ.ಪಿ.ಪ್ರಕಾಶ್: ಆಗಲಿ ಸರ್. ಆಗ ನಮ್ಮನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ ಎನ್ನುವುದರ ಮೇಲೆ ಅವಲಂಬನೆಯಾಗಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಷ್ಟು ಮಾತ್ರ ಹೇಳಬಹುದು. ಅದೇನೆಂದರೆ, ಅವರಿಗಿಂತಲೂ ಬಹಳ ಚೆನ್ನಾಗಿ ನೋಡಿಕೊಳ್ಳುತ್ತೇವೆ. This much guarantee I can give.

ಶ್ರೀ ಎಂ.ಪಿ.ಪ್ರಕಾಶ್: ಆಗಲಿ ಸರ್. ತಮಗೆ ವಂದನೆಗಳು ಸರ್.

ಶ್ರೀ ಆರಗ ಜ್ಞಾನೇಂದ್ರ: ಧೃತರಾಷ್ಟ್ರ ಆಲಿಂಗನ ಆಗಿಬಿಟ್ಟರೆ ಕಷ್ಟವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲ, No, no, ನಮ್ಮಲ್ಲಿ ಹಾಗೆ ಆಗುವುದೇ ಇಲ್ಲರೀ. ಈಗ ನಿಮಗೆ ಆಗಿದೆ ನೋಡಿ, ಪಾಪ. ಮಾನ್ಯ ಆರಗ ಜ್ಞಾನೇಂದ್ರ ಇಷ್ಟು senior man. ಅವರಿಗೆ ಹೇಗೆ treat ಮಾಡಿದ್ದಾರೆಂದು ನಿಮಗೆಲ್ಲ ಗೊತ್ತಿದೆ. ಅದಕ್ಕೆ ಅವರಿಗೂ re-treat ಮಾಡಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಅಲ್ಲ ಸರ್. ನಮ್ಮ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಜನ ನೋಡಿಕೊಂಡಿರುವುದಿಲ್ಲ. ನಿಮ್ಮ ಮೇಲೆ ನಾವು ಕರುಣೆ ಇಟ್ಟಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್: ಅದು ಬಹಳ ಅಪಾಯಕಾರಿಯಾದದ್ದು. ಕರುಣೆ ಅದು ಯಾರೂ ಕೂಡ ಇನ್ನೊಬ್ಬರ ಕರುಣೆಯಲ್ಲಿ ಮುಲಾಜಿನಲ್ಲಿ ಬದುಕಬಾರದು. ಆದ್ದರಿಂದ ಆ ಕರುಣೆ ಬಹಳ ಅಪಾಯಕಾರಿ ಸರ್. ನನ್ನ ಬಗ್ಗೆ ನೀವು ಪ್ರೀತಿ ತೋರಿಸಿ, ಸಾಕು ಅಷ್ಟೆ. ಅವರು ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಾರೋ ಇಲ್ಲವೋ ಎನ್ನುವುದನ್ನು ತಾವು ತೂಕ ಮಾಡಿ. ಅದರ ಬಗ್ಗೆ ಏನೂ ಇಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ಬಹಳ ಗುರುತರವಾಗಿರತಕ್ಕಂಥ ಈ ಬರಗಾಲದ ಬಗ್ಗೆ ಸರ್ಕಾರ ಏನೆಲ್ಲ ಮಾಡಿದೆ ಎನ್ನುವುದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಚರ್ಚೆಗೂ ಕೂಡ ತಯಾರಿದ್ದೇವೆ. ಈಗ ನಮ್ಮಲ್ಲಿಯೇ ಇರತಕ್ಕಂಥ ತೀರ್ಮಾನಗಳ ಹಿನ್ನೆಲೆಯಲ್ಲಿ ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡದೆ ಅದನ್ನು ತಾವು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳುವಂತೆ ಪರಿವರ್ತನೆ ಮಾಡಿ ಅವಕಾಶ ಕಲ್ಪಿಸಿಕೊಡಬಹುದು. ಇಲ್ಲದಿದ್ದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ಏನಿದೆ ಆ ಸಂದರ್ಭದಲ್ಲಿ ಕೂಡ ಬರ ಕುರಿತು ಚರ್ಚೆ ಮಾಡಬಹುದು. ಏಕೆಂದರೆ, ಹಿಂದೆ ಕೊಟ್ಟ ತೀರ್ಮಾನದ ವಿರುದ್ಧ ನಾವು ಹೋಗಬಾರದೆನ್ನುವ ಕಾರಣಕ್ಕಾಗಿಯೇ ನಾನು ವಿರೋಧ ಪಕ್ಷದ ಎಲ್ಲಾ ನಾಯಕರುಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಚರ್ಚೆಯಾಗಬೇಕೆನ್ನುವುದು ತಮ್ಮ ಮುಖ್ಯ ಗುರಿಯಾಗಿರುತ್ತದೆ. ಚರ್ಚೆಗೆ ನಾವು ತಯಾರಿದ್ದೇವೆ. ಯಾವ ರೂಪದಲ್ಲಿ ಚರ್ಚೆಯಾಗಿ ನಾವು ಉತ್ತರ ಕೊಡುವುದಿಲ್ಲ ಎಂದು ತಪ್ಪಿಸಿಕೊಳ್ಳುವುದಾದರೆ ಆ ಮಾತು ಬೇರೆ ಇತ್ತು. ಉತ್ತರ ಕೊಡಲಿಕ್ಕೆ ನಾವು ತಯಾರಾಗಿರುವ ಕಾರಣದಿಂದ ಚರ್ಚೆ ಯಾವ ರೂಪದಲ್ಲಿ ಬಂದರೂ ಕೂಡ ನಿಮಗೆ ಉತ್ತರ ಸಿಗುತ್ತದೆ ಎನ್ನುವ ಕಾರಣಕ್ಕಾಗಿಯೇ ಮತ್ತು ಜನತೆಗೆ ಪರಿಹಾರ ಸಿಗುತ್ತದೆ ಎನ್ನುವ ಕಾರಣಕ್ಕಾಗಿಯೇ ದಯವಿಟ್ಟು ನಿಲುವಳಿ ಸೂಚನೆಯನ್ನು ತಾವು ಮೊದಲನೇ ನೋಟದಲ್ಲಿ you have to dismiss in-limine ಎಂದು ಹೇಳುತ್ತಾರಲ್ಲ ಆ ತರಹದಲ್ಲಿ ತಾವು ಅದನ್ನು ತಿರಸ್ಕಾರ ಮಾಡಿ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

4.30 P.M

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಮ್ಮ ನಿಲುವಳಿ ಸೂಚನೆಗೆ ತಾವು ಮನ್ನಣೆಯನ್ನು ನೀಡಬೇಕಾದ ಅಗತ್ಯವಿಲ್ಲವೆಂದು ಸಮರ್ಥನೆ ಮಾಡಿಕೊಳ್ಳುವಾಗ, 1970ನೇ ಇಸವಿಯಲ್ಲಿ ಈ ಸದನದಲ್ಲಿ ನಡೆದಂಥ ಒಂದು ಪ್ರಕರಣವನ್ನು ಉಲ್ಲೇಖ ಮಾಡಿದ್ದಾರೆ. ನಾವು ಆಡತಕ್ಕಂಥ ಎಲ್ಲಾ ಮಾತುಗಳು ಇಂಥ ಸಂದರ್ಭಗಳಲ್ಲಿ ಕಡತಕ್ಕೆ ಹೋಗುತ್ತವೆ. ಮುಂದೆ ಇದು ಚರಿತ್ರೆಯಾಗುತ್ತದೆ. ಒಂದು ಟೆಂಡರ್ ವಿಚಾರಕ್ಕೆ ಐದಾರು ಜನ ಶಾಸಕರುಗಳು ಟೆಂಡರ್‌ನಲ್ಲಿ ಏರುಪೇರಾಗಿದೆ, ಆದ್ದರಿಂದ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೊಟ್ಟ ವಿಚಾರಕ್ಕೆ ನೀಡಿದ ತೀರ್ಪನ್ನು ರಾಜ್ಯದ 128 ತಾಲ್ಲೂಕುಗಳಲ್ಲಿ ಹಬ್ಬಿರತಕ್ಕಂಥ ಬರಗಾಲದ ಸಮಸ್ಯೆಗೆ ಹೋಲಿಕೆ ಮಾಡಿ, ಅದರ ಮೇಲೆ ನೀವು ಆಧಾರ ಪಟ್ಟು, ಆದ್ದರಿಂದ ನೀವು ತಿರಸ್ಕಾರ ಮಾಡಬೇಕೆಂದು ಹೇಳುವುದಾದರೆ, ನಾನು ಹಿರಿಯರಾದ ಅವರ ಮೇಲೆ ಏನೂ ವ್ಯಾಖ್ಯಾನ ಮಾಡುವುದಿಲ್ಲ. ಈ ಎಲ್ಲ ಮಾತುಗಳು ಕಡತದಲ್ಲಿ ಉಳಿಯಲಿ. ಮುಂದಿನ ಜನಾಂಗಕ್ಕೆ ಬಿಡೋಣ. ಏನು ತೀರ್ಪು ಯಾರ್ಯಾರ ಬಗ್ಗೆ ಅವರು ತೆಗೆದುಕೊಳ್ಳಬೇಕೆನ್ನತಕ್ಕಂಥದ್ದು. ಬೆಳಗಾಂ ಅಧಿವೇಶನ ನಡೆಯಿತು. ಇನ್ನೂ ಒಂದು ಚೂರು ನಮಗೆಲ್ಲೋ ಆಸೆ ಮಿಗಿಲಿತು, ಏನಾದರೂ ಒಳ್ಳೆಯದಾಗಬಹುದು, ಈಗಲೂ ಮಳೆ ಬರಬಹುದು, ಕಡೆಯ ಪಕ್ಷ cycloneನಲ್ಲಾದರೂ ಮಳೆ ಬರಬಹುದು, ನಮ್ಮ ಕೆರೆಕುಂಟೆಗಳಿಗೆ ಸ್ವಲ್ಪ ನೀರು ಬರಬಹುದೆನ್ನುವ ಆಸೆ ಇತ್ತು. ಬೆಳಗಾಂ ಅಧಿವೇಶನ ಆದಮೇಲೆ ನಾವು ಅಧಿವೇಶನ ಸೇರಲಿಲ್ಲ. ಬೆಳಗಾಂ ಅಧಿವೇಶನದ ನಂತರ ಇದು ಮೊದಲನೇ ಅಧಿವೇಶನ. ಪರಿಸ್ಥಿತಿ ಆವತ್ತಿಗೂ ಇವತ್ತಿಗೂ ಮತ್ತಷ್ಟು ಬಿಗಡಾಯಿಸಿದೆ. ಅದು ಕೂಲಿಯಿಂದ ಜೀವನ ಮಾಡತಕ್ಕಂಥವನ ಬದುಕು ಆಗಿರಬಹುದು ಅಥವಾ ಕುಡಿಯುವ ನೀರಿನ ವಿಚಾರ ಆಗಿರಬಹುದು, ಈ ನಾಡಿನ ಪ್ರಜೆಗಳ ಬದುಕಿನ ವಿಚಾರಕ್ಕೆ ಸಂಬಂಧಿಸಿದಂತೆ ಸಿಕ್ಕ ಮೊದಲನೇ ಸಂದರ್ಭದಲ್ಲೇ ಪ್ರಶ್ನೋತ್ತರಕ್ಕೆ ನಾವು ಅಡ್ಡಿ ಪಡಿಸಬಾರದು, ಉಳಿದ ವರದಿಗಳನ್ನೊಪ್ಪಿಸುವುದು ಇವೆಲ್ಲ ನಡೆದುಕೊಂಡು ಹೋಗಲಿ, ಪ್ರತಿಷ್ಠೆ ವಿಚಾರ ಮಾಡಿಕೊಳ್ಳಬಾರದೆಂದು ನಮ್ಮ ಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಿ, ನಿಯಮಾವಳಿಗಳಿಗನುಸಾರವಾಗಿ ತಮಗೆ notice ಅನ್ನು ಕೊಟ್ಟು ಸೂಚನೆ ಕೊಟ್ಟು ಪ್ರಾಸ್ತಾವಿಕ ಮನವಿಯನ್ನು ತಮಗೆ

ಸಲ್ಲಿಸಿದ್ದೇವೆ. ನಾನು ಅವರಿಗೆ ಕೇಳುತ್ತೇನೆ, alright, ನಾವು ಬೇರೆ ವಿಚಾರದ ನಿಯಮದ ಕೆಳಗೆ ಚರ್ಚೆ ಮಾಡಬಹುದು ಎನ್ನುವ ವಿಚಾರ ಬೇರೆ. ಒಂದು ವಿರೋಧ ಪಕ್ಷಕ್ಕೆ ತಮ್ಮ ಕೆಲಸವನ್ನು ತಾವು ಜವಾಬ್ದಾರಿಯಿಂದ ನಿಷ್ಠೆಯಿಂದ ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿದ್ದರೆ ಇಂಥ ಸನ್ನಿವೇಶದಲ್ಲಿ ಇದು ಬಿಟ್ಟು ಬೇರೆ ಯಾವ rules ಕೆಳಗಡೆ ನಮಗೆ ಅವಕಾಶ ಇದೆ? ಕಡೆಗೆ ತಾವೇನು ತೀರ್ಪು ಕೊಡುತ್ತೀರಾ ಅದಕ್ಕೆ ತಲೆಬಾಗುತ್ತೇವೆ. ಅದು ಬೇರೆ ಪ್ರಶ್ನೆ. ರಮೇಶ್ ಕುಮಾರ್‌ರವರು ಅಲ್ಲಿ ಅಧ್ಯಕ್ಷರಾಗಿ ಕುಳಿತಿದ್ದರು. ನಿಜ. ಯಾವುದೇ ಒಂದು ಸ್ಥಾನದಲ್ಲಿ ಕುಳಿತಾಗ ಅವರವರ ಕೆಲಸವನ್ನು ಅವರು ಆ ಸ್ಥಾನಕ್ಕೆ ಏನು ಜವಾಬ್ದಾರಿಯನ್ನು ಹಚ್ಚಿರುತ್ತಾರೋ ಅದಕ್ಕೆ ಹೊಂದಿಕೊಂಡೇ ಮಾಡಬೇಕಾಗುತ್ತದೆ. ಯಾರೂ ಮಾಯಾಬಜಾರ್ ಮಾಡಲಿಕ್ಕೆ ಬರುವುದಿಲ್ಲ. ಆದರೆ ನಮ್ಮ ಮೇಲೆ ಒಂದು social obligation ಎನ್ನುವುದು ಇರುತ್ತದೆ. ನಾನು ಅದರ ಬಗ್ಗೆ ಕೇಳುತ್ತಿರತಕ್ಕಂಥದ್ದು. You take it up under any rule. ನಮ್ಮ ನಾಯಕರು ಮಾತನಾಡುತ್ತಾರೆ. ನಮ್ಮ ಪಕ್ಷದ ಪರವಾಗಿ ಅವರು ತೀರ್ಪು ಕೊಡುತ್ತಾರೆ. I will not arrogate the authority to myself. ಆದರೆ, ನೀವು ಏನು ವಕಾಲತ್ತು ವಹಿಸಿದ್ದೀರಿ? ಯಾವುದೋ ಒಂದು ಟೆಂಡರ್ ವಿಚಾರವನ್ನು ತೆಗೆದುಕೊಂಡು ಬಂದು, ಟೆಂಡರ್ ವಿಚಾರದಲ್ಲಿ Speaker ಕೊಟ್ಟ ruling ಅನ್ನು ಭೀಕರ ಬರಗಾಲಕ್ಕೆ ಹೋಲಿಕೆ ಮಾಡುತ್ತೀರಲ್ಲಾ, ನಮ್ಮ ಪ್ರಯಾಣ ಎಲ್ಲಿಗೆ, ಯಾವ ದಿಕ್ಕಿನಲ್ಲಿ ಹೊರಟಿದೆ? ಇದಕ್ಕಿಂತ ಹೆಚ್ಚು ನಾನೇನೂ ಪ್ರತಿವಾದ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ಪ್ರಕಾರ, ನಮ್ಮ ಪಕ್ಷದ ಪ್ರಕಾರ, ಯಾರು ಈ ಸೂಚನೆಯನ್ನು ತಮಗೆ ಕೊಟ್ಟಿದ್ದೇವೆ, ಸಹಿ ಹಾಕಿರುವ ನಮ್ಮ ಅಭಿಪ್ರಾಯದ ಪ್ರಕಾರ, ಇದು ಅತ್ಯಂತ ಗಂಭೀರವಾದಂಥ ವಿಚಾರ. ಗೋಲಿಬಾರ್ ಆಗಿದೆ. Law and Order problem ಇದೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಬುಡಮೇಲು ಮಾಡುವಂಥ ವಿಚಾರಗಳಲ್ಲಿ ಅವರು ಮಾಡಿರತಕ್ಕಂಥ ಅನೇಕ ಹೇಳಿಕೆಗಳಿವೆ. ಆಡಳಿತವನ್ನು ನಡೆಸುತ್ತಿರುವ ಎರಡೂ ಪಕ್ಷಗಳ ಮಧ್ಯೆ ವಿರಸ ಉಂಟಾಗತಕ್ಕಂಥ ಹೇಳಿಕೆ, ಪ್ರತಿ ಹೇಳಿಕೆಗಳಿವೆ. ಇವು ಯಾವುದರ ಗೋಜಿಗೂ ನಾವು ಹೋಗಿಲ್ಲ. ಪ್ರಶ್ನೋತ್ತರಕ್ಕೆ ಅಡ್ಡ ಬಂದಿಲ್ಲ. ನಾವು ಒಂದು ಜವಾಬ್ದಾರಿ ವಿರೋಧ ಪಕ್ಷವಾಗಿ ಕೆಲಸ ಮಾಡಬೇಕು, ಜನಸಾಮಾನ್ಯರ ದೃಷ್ಟಿಯಲ್ಲಿ ನಾವು ಅವಹೇಳನಕ್ಕೆ ಗುರಿಯಾಗಬಾರದು ಎಂದು ಹೇಳಿ ನಮ್ಮ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ತಮ್ಮ ಮುಂದೆ ನಾವು

ನಿಂತಿದ್ದೇವೆ. ತಮ್ಮಲ್ಲಿ ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ. ಬೆಳಗಾಂ ಅಧಿವೇಶನ ಕಳೆದ ಮೇಲೆ ನಮಗೆ ಅವಕಾಶವೇ ಸಿಕ್ಕಿರಲಿಲ್ಲ. ಇವತ್ತು ಪುನ; ನಾವು ಸೇರಿದ್ದೇವೆ. ಅವತ್ತಿನಿಂದ ಇವತ್ತಿನವರೆಗೆ ತಾಳೆ ಹಾಕಿದರೆ ಅವನ ಜೀವನದ ಸ್ಥಿತಿ ತಳ ಮುಟ್ಟಿದೆ, ಅವನು ಪಾತಾಳಕ್ಕೆ ಹೋಗಿದ್ದಾನೆ. ಅವನ ಪ್ರತಿನಿಧಿಗಳಾಗಿ, ಅವನ ಪರವಾಗಿ ಧ್ವನಿ ಎತ್ತತಕ್ಕಂಥ ಹೊಣೆ ನಮ್ಮ ಮೇಲಿದೆ. ಆದ್ದರಿಂದ, ತಮ್ಮಲ್ಲಿ ನಾವು ಮನವರಿಕೆ ಮಾಡಿಕೊಂಡಿದ್ದೇವೆ. ಈಗಲೂ ಕೂಡ ನಮ್ಮ ಸ್ಪಷ್ಟ ಅಭಿಪ್ರಾಯ, ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇಡೀ ರಾಜ್ಯವನ್ನು ಹಬ್ಬಿ ಹರಡಿರತಕ್ಕಂಥ, ಕಾಡುತ್ತಿರತಕ್ಕಂಥ ಈ ತೀವ್ರವಾದಂಥ ಸಮಸ್ಯೆ ಏನಿದೆ, ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಬೇಕು, ತಾವು ಅಪ್ಪಣೆ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಮ್ಮ ಈ ಮಾತಿನ ರೀತಿ ಮತ್ತು ವಿಚಾರಗಳು ಯಾವ ದಿಕ್ಕಿನಲ್ಲಿ ಹೋಗುತ್ತಿವೆ ಎನ್ನುವುದು ನನಗೆ ಸಂಶಯ ಬರುತ್ತಿದೆ. ತಾವು ಹೇಗೆ ಜನ ಪ್ರತಿನಿಧಿಗಳಾಗಿ ಜನತೆಗೆ ಎಷ್ಟು ಜವಾಬ್ದಾರರಾಗಿದ್ದೀರಿ, ಅಷ್ಟೇ ನಾವು ಕೂಡ ಜವಾಬ್ದಾರರಾಗಿ ಜನಪ್ರತಿನಿಧಿಗಳಾಗಿ ಬಂದಿದ್ದೇವೆ. ತಾವು ಯಾವ ರೀತಿಯಾಗಿ ಕರ್ತವ್ಯವನ್ನು ನಿಭಾಯಿಸುತ್ತೀರಿ ಎನ್ನುವುದರ ಬಗ್ಗೆ ನಾನು ಟೀಕೆಯನ್ನು ಮಾಡಲೇ ಇಲ್ಲ. ನಾನು ಈ ಮಾತನ್ನು ಹೇಳುವಾಗ ಸಂಪೂರ್ಣ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅತ್ಯಂತ ಗಂಭೀರತೆಯಿಂದ ಗುರುತರವಾದಂಥ ರೀತಿಯಲ್ಲಿ ತಮ್ಮ ಅಧಿಕಾರವನ್ನು ತಾವು ಚಲಾಯಿಸಿದ್ದೀರಿ. ತಮಗೆ ನಾನು ಧನ್ಯವಾದಗಳನ್ನು ಕೂಡ ಅರ್ಪಿಸುತ್ತಿದ್ದೇನೆ. ಏಕೆಂದರೆ, ಈ ವಿಚಾರದಲ್ಲಿ ಸ್ಪಷ್ಟೀಕರಣವನ್ನು, ಈ ಸದನದ ಮೂಲಕ ನಮ್ಮ ಪ್ರಭುಗಳಾದಂಥ ಜನತೆಗೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎಂದು ಹೇಳುವ ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕೆ ನಾನು ನಿಮಗೆ ಧನ್ಯವಾದಗಳನ್ನು ಕೂಡ ಅರ್ಪಿಸುತ್ತೇನೆ. ಅಲ್ಲಿ ಪ್ರಶ್ನೆ ಬರತಕ್ಕಂಥದ್ದು ಏನು? ಪ್ರಶ್ನೆ ಇರತಕ್ಕಂಥದ್ದು ಚರ್ಚೆ ಬೇಡವೆಂದಲ್ಲ. ಪ್ರಶ್ನೆ ಇರತಕ್ಕಂಥದ್ದು, ಯಾರು ಯಾರ ಪರವಾಗಿ ಹೆಚ್ಚು ನಿಂತಿದ್ದಾರೆ ಎನ್ನತಕ್ಕಂಥದ್ದು ಅಲ್ಲ. ಅದನ್ನು ಜನತೆ ತೀರ್ಮಾನ ಮಾಡುತ್ತಾರೆ. ಇಲ್ಲಿ ತೀರ್ಮಾನ ಮಾಡಬೇಕಾಗಿರತಕ್ಕಂಥದ್ದು, ಎಲ್ಲ ಸದನದ ಕಲಾಪಗಳನ್ನು ನಿಲುವಳಿ ಸೂಚನೆ ರೂಪದಲ್ಲಿ ಈ ಸಂದರ್ಭದಲ್ಲಿ ತರಬಹುದೆ?

ತರಬಾರದು ಎನ್ನುವುದಾಗಿದ್ದರೆ, Shakdhar and Kaul ನಲ್ಲಿ ಏನು ಹೇಳುತ್ತದೆ? ನಮ್ಮ Speaker ಗಳಾದಂಥವರು ಕಾಲ ಕಾಲಕ್ಕೆ ಏನು ತೀರ್ಮಾನ ಕೊಟ್ಟಿದ್ದಾರೆ? ಒಂದು ತೀರ್ಮಾನದ ಸಮಯದಲ್ಲಿ 3 tender ಬಗ್ಗೆ ಮಾತನಾಡಿರತಕ್ಕಂಥದ್ದು ಇದೆ. ಆ ವಿಚಾರವನ್ನೂ, ಬರಗಾಲವನ್ನೂ ಸಮೀಕರಿಸಿದ್ದೀರಿ ಎಂದು ಹೇಳಿ ತಾವು ಅದನ್ನು ವಿಕೃತಗೊಳಿಸಬೇಕಾದ್ದು ಇಲ್ಲ. ಆದರೆ, ತೀರ್ಮಾನದ ವಿಷಯದಲ್ಲಿರತಕ್ಕಂಥ ಆಶಯ ಭಾಷಣ ಏನು? ಯಾವುದಾದರೂ ವಿಷಯದ ಬಗ್ಗೆ ಪ್ರಶ್ನೆಯಾಗಿರಬಹುದು. ಅಲ್ಲಿ Speaker ರವರು ಕೊಟ್ಟಿರತಕ್ಕಂಥ ಆಶಯ, ನಿಮಗೆ ಬೇರೊಂದು ಅವಕಾಶ ಇರತಕ್ಕಂಥ ಸಂದರ್ಭದಲ್ಲಿ ಆ ಅವಕಾಶವನ್ನು ನೀವು ಉಪಯೋಗಿಸಿಕೊಳ್ಳಬೇಕೇ ವಿನ: ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡಬೇಕಾದ ಅಗತ್ಯತೆ ಇಲ್ಲ ಎನ್ನುವಂಥ ಆಶಯದ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಗಮನ ಸೆಳೆದಿದ್ದೇನೆಯೇ ವಿನ: 3 tender ನ ವಿಚಾರದಲ್ಲಿ ಬರಗಾಲದ ಸಮೀಕರಣ ಎಂದು ಇಲ್ಲ. ಅದಕ್ಕೆ ಬಹಳ ಸಲ ಜಾಣರ ಕೈಯಲ್ಲಿ ಹೇಳತಕ್ಕಂಥದ್ದು. ಕೇಳುವವರ ಮಾತಿಗೆ ಹೇಳುವವರು ಯಾವಾಗಲೂ ಕಡಿಮೆಯಾಗಿರುತ್ತೇವೆ. ಗೌಣವಾಗಿರುತ್ತೇವೆ. ಇನ್ನೊಂದು ವಿಚಾರದಲ್ಲಿಯೂ ಕೂಡ, for the purpose of the present motion it is enough to state that a uniform and long series of rulings in the House of Commons and in the Parliament of India and in our own Legislature in the past have laid down that where an ordinary parliamentary opportunity will shortly occur to discuss the subject matter of an adjournment motion, then the permission of the Speaker to the adjournment motion should be refused ಅನ್ನತಕ್ಕಂಥದ್ದು. ಅಂದರೆ, ಅವಕಾಶ ಮತ್ತೊಂದು ಲಭ್ಯತೆ ಇರತಕ್ಕಂಥ ಕಾರಣ, Shakdhar and Kaul ಬರೆದಿರುವ ಪುಸ್ತಕವನ್ನು ಕೂಡ ತಾವು ಬಹಳ ಜನ ಪರಾಮರ್ಶಿಸಿದ್ದೀರಿ. 5 ವರ್ಷ Speaker ಆಗಿದ್ದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, Rulings ಇಲ್ಲವೆಂದು ಯಾರೂ ವಾದ ಮಾಡಿಲ್ಲ. ಇಲ್ಲಿ ಪ್ರಶ್ನೆ ಇರತಕ್ಕಂಥದ್ದೇನೆಂದರೆ, ತಾವು Governor speech ಗೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ

ಮಾತನಾಡುವಾಗ ಇದನ್ನು ತೆಗೆದುಕೊಳ್ಳಬೇಕು, ಪ್ರತ್ಯೇಕವಾಗಿ ಇದನ್ನು ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥ ವಾದ ತಮ್ಮದು ಇದೆ.

ಶ್ರೀ ಎಂ.ಪಿ. ಪ್ರಕಾಶ್: ಅಥವಾ ನಿಯಮ 69ಕ್ಕೆ convert ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮ ವಾದ ಇಷ್ಟೆ, ಎಷ್ಟೋ ಸಲ ಈ ಮನೆಯಲ್ಲಿ ಚರ್ಚೆಯಾಗಿದೆ. ತಕ್ಷಣವೇ ಅಧ್ಯಕ್ಷರು ಅದನ್ನು Rule 69ಕ್ಕೆ convert ಮಾಡಿ allow ಮಾಡಿದ್ದಾರೆ. ಈಗ ತಮ್ಮ ಹೇಳಿಕೆ ಪ್ರಕಾರ ಈಗ ಇದನ್ನು ಪುನ: ನೀವು agenda ದಲ್ಲಿ ತಂದು time fix ಮಾಡಿ ಆಮೇಲೆ ಚರ್ಚೆಗೆ ತೆಗೆದುಕೊಳ್ಳಿ ಅನ್ನತಕ್ಕ ವಾದ ಒಂದು ಕಡೆ ಇಡುತ್ತಿದ್ದೀರಿ. ಇನ್ನೊಂದು ಕಡೆ ವಾದ ಏನು ಇಡುತ್ತಿದ್ದೀರಿ ಎಂದರೆ, ಈಗಾಗಲೇ Governor speech ಮೇಲೆ ಅದನ್ನು ನಾವು ನಮೂದು ಮಾಡಿದ್ದೇವೆ, ಆ ಚರ್ಚೆ ಸಮಯದಲ್ಲಿಯೂ ಕೂಡ ಇದನ್ನು ತೆಗೆದುಕೊಳ್ಳಬೇಕು ಅನ್ನತಕ್ಕಂಥ ವಾದವನ್ನೂ ಕೂಡ ಇಡುತ್ತಿದ್ದೀರಿ. ನಮ್ಮ ಅನಿಸಿಕೆ, ಎಲ್ಲರೂ ಕೂಡ ಕೇಳತಕ್ಕಂಥದ್ದು ಇಷ್ಟೆ, Governor speechನ page number 7, 8 ರಲ್ಲಿ ಏನು ಹೇಳಿದ್ದೀರಿ, hardly ಏನೆಂದರೆ, ಅತೀವೃಷ್ಟಿಗೆ 10 sentence ಬಳಸಿದ್ದೀರಿ, ಅನಾವೃಷ್ಟಿಗೆ 8 sentence ಬಳಸಿದ್ದೀರಿ. ಅದು ಬಿಟ್ಟು, ಏನು ಮಾಡಿದ್ದೀರಿ, ಏನಿಲ್ಲ ಅನ್ನತಕ್ಕಂಥದ್ದು ಯಾವುದೂ ಕೂಡ ಇದರಲ್ಲಿ ಇಲ್ಲ. ಅದಕ್ಕಾಗಿ ಇದಕ್ಕೆ ಮಹತ್ವ ಬರಬೇಕು. ಇದು ಸಾರ್ವಜನಿಕ ಮಹತ್ವದ ವಿಷಯವೆಂದು ತಾವೇ ಒಪ್ಪಿದ್ದೀರಿ. 175 ತಾಲ್ಲೂಕುಗಳ ಪೈಕಿ ಸುಮಾರು 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಅನ್ನತಕ್ಕಂಥದ್ದನ್ನು ತಾವೇ ಒಪ್ಪಿಕೊಂಡಿದ್ದೀರಿ. ಇಷ್ಟೊಂದು wide scale ಮೇಲೆ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದ್ದಾಗ ತಾವು ಇದಕ್ಕೆ public importance ಎಂದು ಹೇಳುತ್ತೀರೋ, ಇಲ್ಲವೋ? ಅಥವಾ ಸಾರ್ವಜನಿಕ ಮಹತ್ವದ ವಿಷಯವೆಂದು ಹೇಳುತ್ತೀರೋ, ಇಲ್ಲವೋ? ಇದು ಸಾರ್ವಜನಿಕ ಮಹತ್ವದ ವಿಷಯವೆಂದು ಒಂದು ಕಡೆ ಒಪ್ಪಿಕೊಳ್ಳುತ್ತೀರಿ. ತಾವು ಹೇಳಿದ್ದನ್ನು ತಿರುಚಿ ಹೇಳಬೇಕೆಂದು ಅವರು ಹೇಳಲಿಲ್ಲ. ಅವರು ಹೇಳಿದ್ದೆಂದರೆ, ಒಂದು ಸೀಮಿತವಾಗಿರತಕ್ಕಂಥ ಪ್ರಶ್ನೆ. ಅದಕ್ಕೆ ಸಂಬಂಧಪಟ್ಟಂಥ ಚರ್ಚೆಗೆ ಅವರು adjournment motion ಬೇಡ ಎಂದು ಹೇಳಿದ್ದೇ ಹೊರತಾಗಿ ಇದು ಇಡೀ ರಾಜ್ಯ ವ್ಯಾಪಿ ಇರತಕ್ಕಂಥ ಪ್ರಶ್ನೆ ಇರುವುದರಿಂದ ಕೋಟ್ಯಾಂತರ ಜನ ರೈತರಿಗೆ, ಬಡವರಿಗೆ ಇವತ್ತು ನೀರು, ಅನ್ನ, ಜಾನುವಾರುಗಳಿಗೆ ಮೇವು ಇದರ ಸಂಬಂಧವಿದ್ದ ಕಾರಣ ಇದಕ್ಕೆ ಹೆಚ್ಚಿನ ಮಹತ್ವವಿದೆ. ಅದಕ್ಕೆ ಇದಕ್ಕೆ ಹೋಲಿಕೆ

ಬೇಡವೆಂದು ಇಷ್ಟೇ ಹೊರತಾಗಿ ಬೇರೇನಿಲ್ಲ. ಅದಕ್ಕೆ ದಯವಿಟ್ಟು, ತಾವು ಮನಸ್ಸು ಮಾಡಿ ಇದಕ್ಕೆ ಅನುಮತಿ ಕೊಡಿ. ಚರ್ಚೆಯಲ್ಲೇನು ಬರುತ್ತದೆ? ಚರ್ಚೆಗೆ ಬಂದಾಗ ನಮಗೆ ತಿಳಿದಿದ್ದು ನಾವು ಹೇಳುತ್ತೇವೆ. ನೀವು ಈಗಾಗಲೇ ಹೇಳಿದ್ದೀರಿ. ನಾವೇನು ಕ್ರಮವನ್ನು ಜರುಗಿಸಿದ್ದೇವೆ ಎಂದು ಜನತೆಯ ಮುಂದೆ ಇಡುವುದಕ್ಕೆ ನಿಮಗೂ ಅವಕಾಶ ಸಿಗುತ್ತದೆ. ಅದಕ್ಕೆ ದಯವಿಟ್ಟು ಇದನ್ನು allow ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಇಲ್ಲಿ ಪ್ರಶ್ನೆ ಇರತಕ್ಕಂಥದ್ದು, ಇದು ಮಹತ್ವ ಹೌದೋ, ಅಲ್ಲವೋ ಅನ್ನುವುದಕ್ಕಿಂತಲೂ ಹೆಚ್ಚಾಗಿ ನಮಗೂ ಕೂಡ ಈ ಚರ್ಚೆಯಾಗಬೇಕಾದಂಥ ಅಗತ್ಯತೆ ಇದೆ. ಇಲ್ಲಿ ನಾವು ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿ ಯಾವ ಆಧಾರದ ಮೇಲೆ ತಾವು ತಮ್ಮ ಕರ್ತವ್ಯವನ್ನು ನಿಭಾಯಿಸಬೇಕು, ನಾವು ಯಾವ ಕರ್ತವ್ಯವನ್ನು ನಿಭಾಯಿಸಬೇಕು ಎನ್ನುವುದಕ್ಕೆ ನಿಯಮಾವಳಿಗಳಿವೆ. ಅದಕ್ಕೆ ವ್ಯಾಖ್ಯಾನಗಳಿವೆ. ಅದಕ್ಕೆ ಬೇಕಾಗಿರತಕ್ಕಂಥ ಅನೇಕ ನಮ್ಮ ಮಾರ್ಗದರ್ಶಿ ಸೂತ್ರಗಳೂ ಕೂಡ ಇವೆ. Shakdhar and Kaul ನವರು ಬರೆದಿರುವ ಪುಸ್ತಕದಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ, adjournment motion are not normally allowed during the budget discussion or during the discussions on the motion of thanks on a President's address, as members have sufficient opportunity to focus the attention of the House to any matter during that discussion ಅನ್ನುವುದನ್ನೂ ಹೇಳುತ್ತಾರೆ. ನಾನು ಇದೇ ಒಂದು sacrosanct ಇದು ಬಿಟ್ಟು ಹೋಗಬಾರದೆಂಬ ಮಾತನ್ನು ಹೇಳುವುದಿಲ್ಲ. ಅದಕ್ಕಾಗಿ ಎರಡೂ ಅವಕಾಶಗಳಿರುವುದು. ಪರ್ಯಾಯವಾಗಿ ಈ ವಿಷಯವನ್ನೇ ಚರ್ಚೆ ಮಾಡಬೇಕಾದಂಥ ಅಗತ್ಯತೆ ಇದ್ದಾಗ ತಾವು ವಂದನಾ ನಿರ್ಣಯದ ಸಂದರ್ಭದಲ್ಲಿಯೂ ಕೂಡ ಅದರ ಬಗ್ಗೆ ಮಾತನಾಡಬಹುದು. ಆದರೆ, ವಂದನಾ ನಿರ್ಣಯದಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗುತ್ತವೆ, ಅದಕ್ಕೆ ಅಷ್ಟು ಗಹನತೆ ಸಿಗುವುದಿಲ್ಲ, ಅದಕ್ಕೆ ಬೇಕಾಗಿರತಕ್ಕಂಥ ಸಂಪೂರ್ಣ ಗಮನ ಅದರ ಕಡೆಗೆ ಹೋಗುವುದಿಲ್ಲ ಎನ್ನುವುದಾಗಿದ್ದರೆ, ಅದನ್ನು ನಿಯಮ 69ರ ಕೆಳಗೆ ಪರಿವರ್ತನೆ ಮಾಡಿರತಕ್ಕಂಥ ಅನೇಕ ಉದಾಹರಣೆಗಳು ಇವೆ. ಅದು ತಮಗೂ ಕೂಡ ಗೊತ್ತಿದೆ. ಇಡೀ ನಮ್ಮ adjournment motionನ ವಿಚಾರದ

ಹಿನ್ನೆಲೆ ಕೂಡ ಇರತಕ್ಕಂಥದ್ದು ಏನೆಂದರೆ ಚರ್ಚೆಯಾಗಬೇಕೆಂಬುದಾಗಿದೆ. ಅದಕ್ಕೆ ಸರ್ಕಾರದಿಂದ ಉತ್ತರ ಸಿಗಬೇಕು. ಆದ್ದರಿಂದ, ನಾನು ಮತ್ತೆ ಅದರ ಬಗ್ಗೆ ಹೇಳಬೇಕಾದಂಥದ್ದಿಲ್ಲ. ನಾವು ಚರ್ಚೆಗೆ ಹಿಂಜರಿಯತಕ್ಕಂಥವರಲ್ಲ. ನಾಚಿಕೆ ಪಡಬೇಕಾದ ಅಗತ್ಯವೂ ಕೂಡ ಇಲ್ಲ. ಆದ್ದರಿಂದ, ದಯವಿಟ್ಟು, ಇದನ್ನು ತಾವು 69ರ ನಿಯಮಕ್ಕೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಂಡರೆ, ತತ್‌ಕ್ಷಣದಲ್ಲೇ ಚರ್ಚೆಗೆ ನಾವು ತಯಾರಿದ್ದೇವೆ. ಈಗಲೇ ತಾವು ತೆಗೆದುಕೊಳ್ಳಬಹುದು. ತಾವು ಅದರ ಮೇಲೆ ಮಾತನಾಡಬಹುದು ಅಥವಾ ಆಕಸ್ಮಾತ್ ವಂದನಾ ನಿರ್ಣಯದ ಸಂದರ್ಭದಲ್ಲಿ ಆಗಬಹುದು ಅಥವಾ ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು. ಈಗ ಈ ನಿಮಿಷದಲ್ಲಿ ಉತ್ತರ ಕೊಡಲಿಕ್ಕೆ ನಾವು ತಯಾರಿದ್ದೇವೆ. ಅದನ್ನು ನಿಯಮ 69ರ ಕೆಳಗೆ ತೆಗೆದುಕೊಳ್ಳಲಿ ವಿನಃ adjournment motion ರೂಪದಲ್ಲಿ ಬೇಡವೆಂದು ಹೇಳಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಹುಶಃ ನಾನೂ ಇದನ್ನು ನೋಡುತ್ತಿದ್ದೇನೆ. ಇದು ಹೀಗೆ ಒಂದು ನಿಲುವಳಿ ಸೂಚನೆ ತರುವುದು, ಆಮೇಲೆ, ಅದಕ್ಕೆ ಬೇಡವೆಂದು ಏನಿದೆ ಅದನ್ನು ಹೇಳುವುದು. ಆಮೇಲೆ, ನೀವು ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ಕೊಡುವುದು ಇದು ನಡೆದೇ ಇದೆ. ಯಾವಾಗ ಇದು ಶುರುವಾಗಿದೆ ಆಗಿನಿಂದ ಇದು ಹಾಗೇ ಇದೆ. ದಯವಿಟ್ಟು ತಾವು ಇದರ ಬಗ್ಗೆ ಹೇಳುವ ಮುನ್ನ ನಿಲುವಳಿ ಸೂಚನೆ ಯಾವ ಪರಿಸ್ಥಿತಿಯಲ್ಲಿ ಕೊಟ್ಟಿದ್ದಾರೆ ಆ ಉದಾಹರಣೆಯನ್ನು ತಾವು ಹೇಳಿ. ಹಿಂದೆ ಯಾವಾಗಲಾದರೂ ಕೊಟ್ಟಿರುವ ಉದಾಹರಣೆ ಇರುತ್ತದೆ ಅಲ್ಲವೆ ತಮಗೆ ಗೊತ್ತಿರುತ್ತದೆ ಏಕೆಂದರೆ ತಾವು ಹಿರಿಯರು ಇದ್ದೀರಿ, ಯಾವ ಸಂದರ್ಭದಲ್ಲಿ ಕೊಟ್ಟಿದ್ದಾರೆಂಬುದನ್ನು ಮೊದಲು ಹೇಳಿ, ಅದಕ್ಕೂ ಇದಕ್ಕೂ ಸಂಬಂಧವಾಗುವುದಿಲ್ಲ ಅದಕ್ಕಾಗಿ ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ದಯವಿಟ್ಟು ಹೇಳಿ. ಹಿಂದೆ ನಿಲುವಳಿ ಸೂಚನೆಯನ್ನು ಅಲೌ ಮಾಡಿರುವಂಥ ಉದಾಹರಣೆಗಳು ಕೆಲವು ಇವೆ. ತಾವು ದಯವಿಟ್ಟು ಈ ರೀತಿಯಾಗಿ ಅಲೌ ಮಾಡಿರತಕ್ಕಂಥ ಉದಾಹರಣೆಯನ್ನು ತೆಗೆದುಕೊಂಡು, ಅದನ್ನು ಅಲೌ ಮಾಡಿದ್ದಕ್ಕೆ ಇದಕ್ಕೆ ಬಹಳ ಅಂತರವಿದೆ ಹೀಗಾಗಿ ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲ, ಅದಕ್ಕಾಗಿ ಇದನ್ನು 69 ಕ್ಕೆ ಕನ್‌ವರ್ಟ್ ಮಾಡಿದ್ದೇನೆಂದು ತಾವು ದಯಮಾಡಿ ಹೇಳಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ತಾವು ಹೇಳುವುದನ್ನು ನೋಡಿದರೆ, ಅಲೌ ಮಾಡಿದಂತಹ ಸಂದರ್ಭಗಳು ಇವೆ. ಇದರ ಬಗ್ಗೆ ಅಕಾಡೆಮಿಕ್ ಚರ್ಚೆ ಮಾಡುತ್ತಾ ಹೋದರೆ ಸಮಯವಿರುವುದಿಲ್ಲ. ಹಿಂದೆ ಕೂಡ ಅನೇಕ ಸಮಯದಲ್ಲಿ ನಿಲುವಳಿ ಸೂಚನೆಯನ್ನು ಅಲೌ ಮಾಡಿದಂಥ ಸಂದರ್ಭಗಳು ಇವೆ.

ಶ್ರೀ ಎಸ್.ಎಸ್.ಪಾಟೀಲ್: ಯಾವಾಗ ನೋಡಿದರೂ ಇದೇ ಸಮಸ್ಯೆಯಾಗುತ್ತದೆ ಆದುದರಿಂದ ಅದನ್ನು ತೆಗೆದುಬಿಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, It is a matter of public importance, sudden occurence ಎನ್ನತಕ್ಕಂಥ ಶಬ್ದಗಳನ್ನು ಬಳಸುತ್ತಾರೆ. ಈಗ ಬರಗಾಲ ಬಹಳ ದಿವಸಗಳಿಂದ ಇರುವುದರಿಂದ ಇದರ ಬಗ್ಗೆ ಹಿಂದೆ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅದರ ಬದಲು 69ರ ಕೆಳಗೆ ಇದನ್ನು ತೆಗೆದುಕೊಳ್ಳಿ ಎಂದು ನಮ್ಮ ವಾದ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಬರಗಾಲದಂಥ ಪ್ರಮುಖವಾದ ಹಾಗೂ ಮಹತ್ವದ ವಿಷಯವೂ ಕೂಡ ಇದರಲ್ಲಿ ಬರುವುದಿಲ್ಲವೆಂದರೆ ಈ ರೂಲ್‌ನ ಅವಶ್ಯಕತೆ ಏನೀದೆ? ಇದನ್ನು ತೆಗೆದು ಬಿಡಿ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಈ ರೂಲ್ ಅನ್ನು ತೆಗೆದುಬಿಡಿ. ಇಲ್ಲದಿದ್ದರೆ ಇದನ್ನು ನಾವು ಏಕೆ ತೆಗೆದುಕೊಳ್ಳುವುದಿಲ್ಲ, ರೂಲ್ 69ಕ್ಕೆ ಕನ್‌ವರ್ಟ್ ಮಾಡುತ್ತೇವೆಂದು ತಾವು ಉದಾಹರಣೆಯನ್ನು ಕೊಟ್ಟು ಹೇಳಬೇಕಾಗುತ್ತದೆ. ಇಲ್ಲದೆ ಇದ್ದರೆ ಇದಕ್ಕೆ ಏನು ಮಹತ್ವ ಬರುವುದಿಲ್ಲ. ನಿಲುವಳಿ ಸೂಚನೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದಾಗ ಮಾತ್ರ ಇದಕ್ಕೆ ಮಹತ್ವ ಬರುತ್ತದೆ. ಬರಗಾಲವೇ ಇದರಲ್ಲಿ ಬರುವುದಿಲ್ಲವೆಂದರೆ ಇನ್ಯಾವ ವಿಷಯ ಬರುತ್ತದೆ? ತಾವು ಇದನ್ನು ರಿಜೆಕ್ಟ್ ಮಾಡುವ ಮುಂಚೆ ಅದನ್ನು ಹೇಳಬೇಕಾಗುತ್ತದೆ. ಈ ರೀತಿಯಾಗಿಯಾದರೂ ಹೇಳಬೇಕು ಇಲ್ಲದಿದ್ದರೆ ಇದನ್ನು ಅಲೌ ಮಾಡಬೇಕು. ಎರಡಲ್ಲಿ ಒಂದನ್ನು ತಾವು ದಯಮಾಡಿ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ: ಮಾನ್ಯ ಪ್ರಕಾಶ್‌ರವರು ಕೌಲ್ ಅಂಡ್ ಶಕ್ದರ್ ರವರ ಏನು ರೂಲಿಂಗ್ ಓದಿದರು, ಅದಲ್ಲಿಯೇ ಹೇಳಿದ್ದಾರೆ. ನಾರ್ಮಲಿ ಬಜೆಟ್ ಸೇಷನ್‌ನಲ್ಲಿ ಮತ್ತು ಗೌರ್‍ನರ್ ಸ್ಪೀಚ್‌ನಲ್ಲಿ ಇದನ್ನು ಅಲೌ ಮಾಡುವುದಿಲ್ಲ. ನಾರ್ಮಲಿ ಅದು ಇರಬಹುದು. ಆದರೆ ಇದು special circumstance ಇರುವುದರಿಂದ you must allow. ನಿಮಗಂತೂ ರೈತರ

ಬಗ್ಗೆ ಹೆಚ್ಚಿನ ಆಸಕ್ತಿ, ಪ್ರೀತಿ , ವಿಶ್ವಾಸ ಇದೆ. ಇದು ನಿಮ್ಮ ಕೈಯಲ್ಲಿದೆ. ಬಾಕಿ ವಿಷಯ ತೆಗೆದುಕೊಳ್ಳುವುದು ಬಿಡುವುದು ಅವರ ಕೈಯಲ್ಲಿ ಇರಬಹುದು, ಅಟ್‌ಲಿಸ್ಟ್ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು, ರೈತರ ಸಮಸ್ಯೆಗೆ ಸ್ಪಂದಿಸತಕ್ಕಂಥದ್ದಕ್ಕೆ ಅವಕಾಶ ಮಾಡಿ ಕೊಡುವುದು ತಮ್ಮ ಕೈಯಲ್ಲಿ ಇದೆ. ಆದುದರಿಂದ ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ. ಏಕೆಂದರೆ, ಅದು ನಾರ್ಮಲಿ ಎಂದು ಇದೆ. ಅದು ಏನು ಆ ರೂಲಿಂಗ್ mandatory ಅಲ್ಲ. ಅವರು ಒಪ್ಪಿಕೊಳ್ಳುತ್ತಾರೆ. ಅದಕ್ಕಾಗಿ ತಾವು ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಎಸ್.ಎಸ್. ಪಾಟೀಲ್‌ರವರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ, adjournment motion, if it is carried it is a strong disapproval of government policy. ಎನ್ನತಕ್ಕಂಥ ರೀತಿಯಲ್ಲಿ ಅದಕ್ಕೊಂದು ಮಹತ್ವ ಇದೆ. ಅದು ಏನು ಸೆನ್ಸಾರ್ ಆಗತಕ್ಕಂಥದ್ದಿಲ್ಲ. ಸೆನ್ಸಾರ್ ಆಗಬೇಕೆಂದರೆ ಮತ್ತೆ vote of confidence ಬರಬೇಕಾಗುತ್ತದೆ. ಅಷ್ಟಕ್ಕೆ ಸೀಮಿತ. ಆದುದರಿಂದ adjournment motion ಎನ್ನತಕ್ಕಂಥ ಪ್ರಾವಿಜನ್ ಅನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ. ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ತಾವು ಹೇಳಿದಂತೆ ತಾವೇ ಇದರ ಬಗ್ಗೆ ನಿರ್ಣಯಿಸಬೇಕಾಗುತ್ತದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಎಸ್.ಎಸ್.ಪಾಟೀಲ್‌ರು ಹೇಳಿದ ಮಾತಿನ ಅರ್ಥವೇನೆಂದರೆ, ಅವರು ಹಿಂದೆ ಈ ಸದನದಲ್ಲಿ ಒಂದೆರಡು ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಒಂದು ಸಾರಿಯಾದರೂ ಆಡ್ಮಿಟ್ ಮಾಡದೇ ಹೋದರೆ ಅದು ಇದ್ದು ಏನು ಪ್ರಯೋಜನ ಅದನ್ನು ತೆಗೆದು ಹಾಕಿರಿ ಎಂದು ಅವರು ಹೇಳುವ ಮಾತಿನ ಅರ್ಥ.

SRI. M.P. PRAKASH: If it is carried, it is a strong disapproval.

SRI. K.R. RAMESH KUMAR: Virtually it amounts to censure motion. But the fact remains..

SRI. M.P. PRAKASH: It does not, Sir.

SRI. K.R. RAMESH KUMAR: It amounts to that, I said. Generally, no Presiding Officer gives consent. But, Hon.Minister, my submission is, looking at the gravity of the situation any responsible Opposition is left with no option but to resort to this course. It is only to bring to the notice of the government through the Speaker the magnitude of the seriousness involved and we are trying to do that. The very object of having this proviso in the working our rules is to draw the attention of the government and to highlight. ನಾವು ಅದರ ಗಾಂಭೀರತೆಯನ್ನು ತಮಗೆ ಪರಿಚಯ ಮಾಡಿಸುವ ದೃಷ್ಟಿಯಿಂದ ಇದನ್ನು ಇಟ್ಟುಕೊಂಡಿದ್ದೇವೆ. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಉಳಿದಿದ್ದು ತಮಗೆ ಬಿಟ್ಟದ್ದು.

ಅಧ್ಯಕ್ಷರು: ಈಗ ಈ ನಿಲುವಳಿ ಸೂಚನೆಯನ್ನು ನಾನು ಮಾರ್ಪಾಡು ಮಾಡಿ ರೂಲ್ 69ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಸರ್ಕಾರದವರು ಕೂಡ ಚರ್ಚೆಗೆ ನಾವು ಈಗಲೇ ಸಿದ್ಧವಾಗಿದ್ದೇವೆಂದು ಹೇಳಿರುವುದರಿಂದ ಈಗ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಆರಂಭ ಮಾಡಬಹುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಹೇಳುವಾಗ ಕಾರಣಗಳನ್ನು ಓದಬೇಕಾಗುತ್ತದೆ. ಈ ಕಾರಣಗಳಿಂದ ಎಂದು ಇಂಥ ರೂಲ್‌ನ್ನು ಓದಿ ಇದರ ಪ್ರಕಾರ ಕನ್‌ವರ್ಟ್ ಮಾಡಿದ್ದೇನೆಂದು ತಾವು ದಯವಿಟ್ಟು ಹೇಳಬೇಕಾಗುತ್ತದೆ. ನಾನು ತಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ. ತಾವು ದಯವಿಟ್ಟು ಇದಕ್ಕೆ ಸಂಬಂಧಪಟ್ಟಹಾಗೆ ಕಾರಣಗಳನ್ನು ಓದಿಬಿಟ್ಟರೆ ಅದು ರೆಕಾರ್ಡ್‌ಗೆ ಹೋಗುತ್ತದೆ ಅದು ಸರಿಯಾಗುತ್ತದೆ ಅದುದರಿಂದ ಅದು ಒಳ್ಳೆಯ ರೂಲಿಂಗ್ ಆಗುತ್ತದೆ. ಇದನ್ನೆಲ್ಲಾ ತಾವು ದಯವಿಟ್ಟು ಓದಿರಿ. ಇದನ್ನೆಲ್ಲಾ ತಾವು ಓದಿದರೆ ಅದು ಒಳ್ಳೆಯ ರೂಲಿಂಗ್ ಆಗುತ್ತದೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ಇಲ್ಲಿಯವರೆಗೆ ಎಲ್ಲರೂ ಚರ್ಚೆ ಮಾಡಿದ್ದಾರೆ. ಈಗ ನಾನು ಅದನ್ನು ಮಾರ್ಪಾಡು ಮಾಡಿ ರೂಲ್ 69ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ, ಸರ್ಕಾರವೂ ಸಿದ್ಧವಿದೆ. ಈಗ ಚರ್ಚೆ

ಆರಂಭವಾಗಲಿ. ರಾಜ್ಯದಲ್ಲಿ ಬರದ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ಚರ್ಚೆಯಾಗಲಿ, ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

9. ನಿಯಮ 69ರ ಮೇರೆಗೆ ಚರ್ಚೆ.

ವಿಷಯ: ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಎಂ.ಪಿ. ಪ್ರಕಾಶ್ ರವರು ಬಹಳಷ್ಟು ಕಾನೂನಿನ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಬರಗಾಲದ ಭೀಕರವಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಹೇಗೆ ಇದೆ ಎಂದು ಹೇಳಿದ್ದಾರೆ. ವಿಶೇಷವಾಗಿ ಹಳ್ಳಿಗಳಲ್ಲಿ ಇದು ಪ್ರಾರಂಭವಾಗಿದೆ. ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ನಮ್ಮ ಆರೋಪ. ತಾವು ಇದನ್ನು ಕೊನೆಯದಾಗಿ ರೂಲ್ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಈಗಾಗಲೇ ತಮ್ಮ ತೀರ್ಮಾನ ನೀಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲೂ ಕೂಡ ಇದರ ಬಗ್ಗೆ ಚರ್ಚೆಗೆ ಅವಕಾಶ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದಾಗೆ, ಈ ಒಂದು ಆರು ತಿಂಗಳ ಅವಧಿಯಲ್ಲಿ ಬೆಳಗಾವಿಯ ಅಧಿವೇಶನ ಆದ ನಂತರ ಬಹಳಷ್ಟು ವಿಷಯಗಳು ನಮಗೆ ಬಂದಿವೆ. ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಅವಕಾಶವೂ ಕೂಡ ನಮಗೆ ಇದೆ. ಸಾಲ ಮನ್ನಾ ಮಾಡುವ ಬಗ್ಗೆ, ಇವತ್ತು ಗುಲ್ಬರ್ಗಾದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಹೇಳಿಕೆ, ಮತ್ತು ನಂತರದಲ್ಲಿ ಮಾನ್ಯ ಕುಮಾರಸ್ವಾಮಿಯವರ ಹೇಳಿಕೆ, ಇದು ದೊಡ್ಡ ಕಾಂಪಿಟೇಶನ್ ಆಗಿಬಿಟ್ಟಿದೆ. ಕೊನೆಯದಾಗಿ ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲಿಯವರೆಗೆ ಈ ಒಂದು Common Minimum Programme ಇದೆ. ಒಟ್ಟಾರೆ ಕೆಲಸ ಮಾಡತಕ್ಕಂಥ ದಾಟಿ ಬೇರೆ ಇದೆ. ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಇವತ್ತು ನಮ್ಮ ಅಧಿಕಾರಕ್ಕೆ ಯಾರೂ ಕೂಡ ಪ್ರಶ್ನೆ ಹಾಕತಕ್ಕಂಥದ್ದಿಲ್ಲವೆಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ರಾಜ್ಯದ ಅಬಿವೃದ್ಧಿ ಕೆಲಸ ಕಾರ್ಯಗಳು ಆಗಬೇಕಾದರೆ ಕೊನೆಯದಾಗಿ ಸಂಪುಟದಲ್ಲಿ ಅದರ ಬಗ್ಗೆ ನಿರ್ಣಯವಾಗಬೇಕಾಗುತ್ತದೆ. ಇದರ ಬಗ್ಗೆ ಸಾಕಷ್ಟು ವ್ಯತ್ಯಾಸಗಳಿವೆ. ಮತ್ತು ರಾಜಕೀಯವಾಗಿ ವ್ಯತ್ಯಾಸವಾಗಿವೆ. ಜೊತೆಗೆ ಆ ಒಂದು ಪಕ್ಷದ ರಾಷ್ಟ್ರಾಧ್ಯಕ್ಷರು ಕೂಡ ಪ್ರತ್ಯೇಕವಾದಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ. ಇವೆಲ್ಲವನ್ನು